UNIVERSAL LIBRARY
OU_200767
UNIVERSAL LIBRARY

# ವಿಮರ್ಶಕ ವೈದ್ಯ

ಡಿ. ಎಲ್. ಸಿ. ( ರಸಿಯಾ )

## ಏಕಾಂಕ ದೃಶ್ಯವೊಂದು

★

## ಮುನ್ನುಡಿ

ಸಾಹಿತ್ತ್ಯಿಕ ಹಾಸ್ಯವನ್ನೊಳಗೊಂಡ ರೂಪಕಗಳು ನಮ್ಮಲ್ಲಿ ಕಡಿಮೆ. ಸಾಹಿತ್ಯವನ್ನೇ ವಸ್ತುವನ್ನಾಗಿರಿಸಿಕೊಂಡ ಸುಕುಮಾರಪ್ರಯೋಗದ ಜಗತ್ತಿಗೆ ವಿಮರ್ಶೆ, ವಿಡಂಬನೆಗಳು ಉತ್ತರ-ದಕ್ಷಿಣ ಧ್ರುವಗಳಂತಿವೆಯೆಂದು ಹೇಳಬಹುದು. ಇವುಗಳ ನಡುವೆ ಅಣಕ, ವಿದಗ್ಧತೆ, ವ್ಯಂಗ್ಯೋಕ್ತಿ, ವಿನೋದ, ಕೊಂಕುನುಡಿ ಇವೇ ಮೊದಲಾದ ಬೇರೆ ಬೇರೆ ವೃತ್ತಿಗಳು ನುಳಿದುಹೋಗುತ್ತವೆ. ಸಾಹಿತ್ಯದಲ್ಲಿಯಾಗಲಿ, ಜೀವನದಲ್ಲಿಯಾಗಲಿ, ನಮ್ಮ ಅಭಿಪ್ರಾಯಗಳು ಇಲ್ಲವೆ ರೀತಿಗಳು ವಿಪರೀತಕ್ಕಿಳಿದಾಗ, ಸತ್ಯದ ಆಭಾಸವನ್ನುಂಟುಮಾಡುವಂತೆ ಪ್ರಕಟಗೊಂಡಾಗ ಹಾಸ್ಯದ ಯೋಜನೆಯಿಂದ ಸತ್ಯವನ್ನು ಎತ್ತಿಹಿಡಿದು ಭಾವವೈಪರೀತ್ಯವನ್ನು ಇಲ್ಲದಾಗಿಸುವದು ಸಾಧ್ಯವಾಗುತ್ತದೆ. ನಮ್ಮ ಇಂದಿನ ಸಾಹಿತ್ತ್ಯಿಕ ದೃಷ್ಟಿಯನ್ನು ಈ ಮಾನದಂಡದಿಂದ ಒರೆದು ನೋಡಲು ನಾನಿಲ್ಲಿ ಹವಣಿಸಿದ್ದೇನೆ.

ಇಂದಿನ ಕೆಲವೊಂದು ಸಾಹಿತಿಗಳ ಕೃತಿಗಳಿಂದ ಉದಾಹರಣೆಗಳನ್ನು ಆಯ್ದುಕೊಂಡ ಮಾತ್ರಕ್ಕೆ ಅವರನ್ನು ವಿಡಂಬಿಸುವದೇ ಇಲ್ಲಿಯ ಉದ್ದೇಶವಿದೆಯೆಂದು ಯಾರೂ ತಿಳಿಯಬಾರದೆಂದು ನಾನು ಬಿನ್ನವಿಸುತ್ತೇನೆ. ವೈಯಕ್ತಿಕ ಟೀಕೆಯಿಂದ ಸಾಹಿತ್ಯಕ್ಕಾಗುವ ಹಾನಿಯು ಅಷ್ಟಿಷ್ಟೆಂದಲ್ಲ. ಉದಾಹರಣೆಗಳನ್ನು ಅವರಿವರ ಕೃತಿಗಳಿಂದ ಆಯ್ದುಕೊಂಡಿದ್ದರೂ, ಅವರ ಕೃತಿಗಳ ಹಾಗು ಅವರ ವಿಷಯದಲ್ಲಿ ನನಗೆ ಪ್ರೀತಿ ಆದರಗಳಿವೆಯೆಂದು ಹೇಳಬಯಸುತ್ತೇನೆ. ಇಲ್ಲಿ ಟೀಕೆಗೆ ಪಾತ್ರವಾದುದು ಭಾವವೈಪರೀತ್ಯವು ಮಾತ್ರ. ಇಂಥ ವಿಪರೀತ ದೃಷ್ಟಿಯು ಪ್ರತಿಯೊಬ್ಬರಲ್ಲಿಯೂ ಅನೇಕ ಸಲ ಕಾಣಿಸಿಕೊಳ್ಳುವದೆಂಬುದು ಎಲ್ಲರ ಅನುಭವದ ಮಾತು. ಆದರೂ ಈ ವಿಷಯದಲ್ಲಿ ಯಾವ ತಪ್ಪುತಿಳುವಳಿಕೆಗೂ ಅವಕಾಶ ಕೊಡಬಾರದೆಂದು ನಾನು ಇಲ್ಲಿಯ ಉದಾಹರಣೆಗಳನ್ನು ವಿಶೇಷತಃ ನನ್ನ ಸ್ನೇಹಿತರ ಕೃತಿಗಳಿಂದ ಆಯ್ದುಕೊಂಡಿದ್ದೇನೆ. ನನ್ನ ಕೃತಿಗಳೂ ಇದಕ್ಕೆ ಹೊರತಾಗಿಲ್ಲ.

"You are the top" ಎಂಬ ಆಂಗ್ಲ ಕವಿತೆಯು ಅಮೇರಿಕೆಯಲ್ಲಿ ಪ್ರಚಲಿತವಾಗಿದ್ದ ಒಂದು broad-way-song ; ಅಂದರೆ ಹಾಸ್ಯಮಯ ಪ್ರೇಮಗೀತೆಯಾಗಿದೆ. ಅದನ್ನು ಇಲ್ಲಿ ಸಂದರ್ಭಾನುಸಾರವಾಗಿ ಬಳಸಿಕೊಂಡಿದ್ದೇನೆ. ನೀಲಕಂಠಶಾಸ್ತ್ರಿಗಳ ಚಂಪೂಕಾವ್ಯವನ್ನು ಬರೆದುಕೊಟ್ಟದ್ದಕ್ಕಾಗಿ ನಾನು ಗೆಳೆಯ ಮುಗಳಿಯವರಿಗೆ ಋಣಿಯಾಗಿದ್ದೇನೆ.

ಈ ದೃಶ್ಯವನ್ನು ಅಭಿನಯಿಸುವ ಪೂರ್ವದಲ್ಲಿ ಅನುಮತಿಯನ್ನು ಪಡೆಯಬೇಕಾಗಿ ಬಿನ್ನಹವಿದೆ. ಏನೂ ಹೆಚ್ಚು ಕಡಿಮೆಯಿಲ್ಲದೆ ರಂಗಭೂಮಿಯ ಮೇಲೆ ಅದರ ಪ್ರಯೋಗವಾಗಬೇಕು.

[ ಏಕೀಕೃತ ಕರ್ನಾಟಕದ ವಿಶಾಲವಾದ ನಗರವೊಂದರಲ್ಲಿ ಬಾಕೀಕೃತರ ಬೀದಿಗೆ ಹೊಂದಿದ, "ಡಾ. ದಿನಕರರಾವ, ಡಿ. ಎಲ್. ಸಿ ( ರಸಿಯಾ ) " ಎಂಬ ದೊಡ್ಡ ಪಾಟಿಯುಳ್ಳ ಕಟ್ಟಡದೊಳಗೆ ತನ್ನ ಕೋಣೆಯಲ್ಲಿ ಡಾ. ದಿನಕರರಾಯನು ಕುರ್ಚಿಯ ಮೇಲೆ ಕೂತಿರುತ್ತಾನೆ. ಅವನ ಟೇಬಲ್ಲಿನ ಮೇಲೆ ರಾವು ಗನ್ನಡಿಯ ತುಣುಕುಗಳು, ಒಂದೆರಡು ಲೋಲಕಗಳು, ಸಾದಾ ಕನ್ನಡಿಗಳೊಂದೆರಡು ಹಾಗು ಸೂರ್ಯಕಾಂತ ಶಿಲೆಗಳಿರುತ್ತವೆ. ಅಲ್ಲದೆ "How to be" ಎಂಬ ಮಾಲೆಯ ಎಲ್ಲ ಗ್ರಂಥಗಳು— How to be a Humourist, How to be an Iconoclast, How to be a Lyric Poet ಮೊದಲಾದವು—ಇರುತ್ತವೆ. ಆದರೆ ಇವುಗಳಿಗಿಂತ ಎದ್ದು ಕಾಣುವ 'How not to be' ಗ್ರಂಥಮಾಲೆಯ 'How not to be a literary Scapegoat,' 'How not to be a Dramatist,' 'How not to be a Novelist' ಮೊದಲಾದ ಗ್ರಂಥಗಳೂ ಮೇಜನ್ನು ಅಲಂಕರಿಸಿರುತ್ತವೆ. ಸಮೀಪದಲ್ಲಿಯೇ ಗೋಡೆಗೆ ಆನಿಸಿದ್ದ ಕಪಾಟನಲ್ಲಿ ಹಿಂದುಸ್ತಾನದ ಎಲ್ಲ ಭಾಷೆಗಳ ಶಬ್ದಕೋಶಗಳೂ, ಯುರೋಪಿನ ಮುಖ್ಯ ಭಾಷೆಗಳ ಶಬ್ದಕೋಶಗಳೂ ಇವೆ. ಅಲ್ಲದೆ ಪ್ರಾಸದ ಕೋಶಗಳು, ಪಡೆಮಾತುಗಳ ಸಂಗ್ರಹಗಳು, ಗಾದೆಮಾತಿನ ಉದ್ಗ್ರಂಥಗಳು, The Standard Elocutionist, Encyclopoedia Britannica, The World's Book of Knowledge, All Knowledge is a nut-shell and a little Knowledge is a bomb-shell, The map of the universe ಮೊದಲಾದ ಜ್ಞಾನಕೋಶಗಳಿವೆ. ಇನ್ನೊಂದು ಮಹತ್ವದ ಗ್ರಂಥವೆಂದರೆ, ರಸ್ಯಾದೇಶದ ಗ್ರಂಥಕಾರನೊಬ್ಬನು ಬರೆದ ವಿಮರ್ಶೆಯ ಇತಿಹಾಸ. (೧) ಕಲ್ಲೊಗೆಯುವ ಕಾಲದ ವಿಮರ್ಶೆ, (೨) ಆಯುಧಗಳನ್ನು ಝಳಪಿಸುವ ಕಾಲದ ವಿಮರ್ಶೆ, (೩) ದುಡ್ಡು ಕೊಡುವ ಕಾಲದ ವಿಮರ್ಶೆ, (೪) ದುಡ್ಡೇ ದೊಡ್ಡಪ್ಪನೆಂಬ ಕಾಲದ ವಿಮರ್ಶೆ, (೫) ದುಡ್ಡು ಕಸಿಯುವ ಕಾಲದ ವಿಮರ್ಶೆ: ಹೀಗೆ ವಿಮರ್ಶೆಯ ಇತಿಹಾಸವನ್ನೊಳಗೊಂಡ ಐದು ಪುಸ್ತಕಗಳಿವೆ.

ಇನ್ನೊಂದು ಸಣ್ಣ ಕಪಾಟದೆ. ಅದರಲ್ಲಿ ರಸಸಿದ್ಧಿಗೆ ಕವಿಗಳನ್ನೊಯ್ದು ಮುಟ್ಟಿಸಬಲ್ಲ ಅನೇಕ ಔಷಧಿಗಳಿವೆ. ಸೋಮರಸ, ದ್ರಾಕ್ಷಾರಸ, ಬೀಯರ, ಪೋರ್ಟ, ವಿಸ್ಕಿ, ಮಧು, ಓಪಿಯಮ್, ಮರ್ಫಾನೀರಾ, ಗಾಂಜಾ, ತಮಾಖುಪತ್ರ, ನಶ್ಯದಪುಡಿ, ನೀಲಗಿರಿ ಎಣ್ಣೆ, ಚಿರೂಟು,—ಇವುಗಳನ್ನೆಲ್ಲ ಕಾಜಿನ ಕಪಾಟನಲ್ಲಿ ಜತನದಿಂದ ಕಾಯ್ದಿಟ್ಟಿದೆ. ಪ್ರಸಂಗ ಬಂದರೆ ಉಪಯೋಗವಾಗಲೆಂದು ಕ್ಲೋರೋಫಾರ್ಮ, ಸ್ಮೆಲಿಂಗ ಸಾಲ್ಟ, ಹಾಗು ಲಾಫಿಂಗ್ ಗ್ಯಾಸ —ಇವುಗಳ ವ್ಯವಸ್ಥೆಯನ್ನೂ ಮಾಡಲಾಗಿದೆ.

ಗೋಡೆಗಳ ಮೇಲೆ ಅನೇಕ ಪ್ರಸಿದ್ಧ ವಿಮರ್ಶಕರ ಛಾಯಾಚಿತ್ರಗಳಿವೆ. ಒಂದು ಗೋಡೆಯ ಮೇಲೆ ಪ್ಲೇಟೊ, ಎರಿಸ್ಟಾಟಲ್, ಡಾಂಟೆ, ಬಾಯಲೊ, ಲೆಸಿಂಗ, ಸರ್‌ವ್ಯಾಂಟಿಸ್, ಕ್ರೋಚೆ ಮೊದಲಾದವರ ಚಿತ್ರಗಳಿದ್ದರೆ ಇನ್ನೊಂದರ ಮೇಲೆ ಚಾಸರ, ಸಿಡ್ನಿ, ಬೆನ್‌ಜ್ಯಾನ್ಸನ್, ಡ್ರಾಯಡನ್, ಜಾನ್‌ಸನ್, ಕೋಲರಿಜ್, ಆರ್ನೊಲ್ಡ್, ರಿಚರ್ಡ್ಸ ಮೊದಲಾದವರು ಕಂಡುಬರುತ್ತಾರೆ. ಮೂರನೆಯ ಗೋಡೆಯನ್ನು ಟಾಲ್‌ಸ್ಟಾಯ್, ಗಾರ್ಕಿ ಮೊದಲಾದ ರಸಿಯನ್ ಪ್ರಭೃತಿಗಳಿಗೆ ಮೀಸಲಾಗಿಟ್ಟಿದೆ. ನಾಲ್ಕನೆಯದರ ಮೇಲೆ ಮೆದುಳು, ಕಶೇರುಕಾರಜ್ಜು, ಬ್ರಹ್ಮರಂಧ್ರ, ಹೃತ್ಕಮಲ,—ಇವುಗಳ ಆಕೃತಿಗಳನ್ನೂ ವಿವಿಧ ಯೋಗ ಮುದ್ರೆಗಳ ಮಾದರಿಯನ್ನೂ ತೂಗುಹಾಕಿದೆ. ಇದೇ ಗೋಡೆಯ ಮೇಲೆ ನೃಪತುಂಗ, ಪಂಪ, ರಾಘವಾಂಕ, ಕನಕದಾಸ, ಸರ್ವಜ್ಞ ಮೊದಲಾದ ಪ್ರಸಿದ್ಧ ಕನ್ನಡಿಗರ ಭಾವಚಿತ್ರಗಳಿವೆ. ಪ್ರೇಕ್ಷಕರ ಎದುರಿಗಿನ ಗೋಡೆಯ ಕೆಳಗೆ ಒಂದು ಉದ್ದವಾದ ಸೋಫಾ ವ ಒಂದು ಕುರ್ಚಿ ಇವೆ. ಇವುಗಳ ಹತ್ತಿರ ಒಂದು ರೇಡಿಯೊ ಇಟ್ಟಿದ್ದಾರೆ.

ಸಮೀಪದಲ್ಲಿಯೇ ದಿನಕರರಾಯನ ಕಂಪೌಂಡರನಾದ ಭೀಮಣ್ಣನಿದ್ದಾನೆ. ಭೀಮಣ್ಣನೂ ದಿನಕರರಾಯನೂ ಲಂಗೋಟಿ ಗೆಳೆಯರು. ಇಂದು ಭೀಮಣ್ಣನು ಮಾಸಿದ ಧೋತರ ಕೋಟು-ಟೊಪ್ಪಿಗೆಗಳನ್ನು ಧರಿಸಿ ದಿನಕರರಾಯನು ಉತ್ತಮ ರೇಶ್ಮಿ ಸೂಟನಲ್ಲಿದ್ದರೆ,—ಅವರವರ ಹಣೆಬರಹವೇ ಅದಕ್ಕೆ ಕಾರಣ. ಭೀಮಣ್ಣನೂ ಕುರ್ಚಿಯ ಮೇಲೆ ಕುಳಿತಿದ್ದಾನೆ. ಅವನು ಕುಳಿತಲ್ಲಿಯೇ ಗೋಡೆಗೆ ಒಂದು ದೊಡ್ಡ ಪಾಟಿಯಿದೆ.

ತೆರೆಯು ಮೇಲೆದ್ದಾಗ ಭೀಮಣ್ಣನು ಪಾಟಿಯ ಕಡೆಗೆ ನೋಡುತ್ತಿರುತ್ತಾನೆ. ದಿನಕರರಾಯನು "The Critic's Dicta" ಎಂಬ ಮಾಸಿಕದಲ್ಲಿ ಅಚ್ಚಾದ ತನ್ನ ಲೇಖವನ್ನು ಓದುತ್ತ ಕುಳಿತಿರುತ್ತಾನೆ.]

# ಪಾತ್ರಗಳು

★

**ಡಾ. ದಿನಕರರಾಯ**

| | |
|---|---|
| **ಭೀಮಣ್ಣ** | ಅವನ ಕಂಪೌಂಡರು. |
| **ನೀಲಕಂಠ ಶಾಸ್ತ್ರಿಗಳು** | ಚಂಪೂಕಾರರು. |
| **ಕೊಳ್ಳಿ ಮಾಸ್ತರು** | 'ಅಪಹರಣ' ಕರ್ತೃಗಳು. |
| **ಪಾಯಪ್ಪ** | ಹಳ್ಳಿಯ ಕವಿ. |
| **ಏಕಾಂಬರರಾಯ** | 'ರಾಗಧ್ವನಿ' ಪ್ರಚಾರಕ. |
| **ಅಭಿನವ ಚಾ:ಸರರು** | |
| **ಕಿಶೋರ ಕವಿ** | ಅನುಭಾವಿ. |
| **ಶರಣೇಂದ್ರ ಕವಿ** | ಪ್ರಚಾರಕಾವ್ಯನಿಪುಣ. |
| **ರೆಡಿಯೋದ ಮೇಲೆ ಭಟ್ಟಾರಕರು** | ನಾಟಕಕಾರರು. |
| **ವಾಮನ** | ಚಹದಂಗಡಿಯ ಮಾಣಿ. |
| **ರೆಡಿಯೋದ ಮೇಲೆ ಊಹಾಪೋಹರಾಯರು:** | ವ್ಯುತ್ಪತ್ತಿ ಶಾಸ್ತ್ರಜ್ಞರು. |

ಕುಂಡಲಿನೀಕವಿಗಳು. ಮೊಹರಮ್ ಹುಲಿ,
ಝೇಂಡಾ ಹಿಡಿಯುವವ, ಗೆಜ್ಜೆ ಹಿಡಿಯುವವ.

**ಸ್ಥಳ:**

ಡಾ. ದಿಸಕರರಾಯನ ಆ:ಫೀಸು.

**ವೇಳೆ:**

ಒಂದು ದಿನ ಮುಂಜಾನೆ
೧೧ ಗಂಟೆಯಿಂದ ಸಂಜೆ ೫ ಗಂಟೆಯವರೆಗೆ.

[ಏಕೀಕೃತ ಕರ್ನಾಟಕದ ವಿಶಾಲವಾದ ನಗರವೊಂದರಲ್ಲಿ ಬಾಕೀಕೃತರ ಬೀದಿಗೆ ಹೊಂದಿದ, "ಡಾ. ದಿನಕರರಾವ, ಡಿ. ಎಲ್. ಸಿ (ರಸಿಯಾ)" ಎಂಬ ದೊಡ್ಡ ಪಾಟಿಯುಳ್ಳ ಕಟ್ಟಡದೊಳಗೆ ತನ್ನ ಕೋಣೆಯಲ್ಲಿ ಡಾ. ದಿನಕರರಾಯನು ಕುರ್ಚಿಯ ಮೇಲೆ ಕೂತಿರುತ್ತಾನೆ. ಅವನ ಟೇಬಲ್ಲಿನ ಮೇಲೆ ರಾವು ಗನ್ನಡಿಯ ತುಣುಕುಗಳು, ಒಂದೆರಡು ಲೋಲಕಗಳು, ಸಾದಾ ಕನ್ನಡಿಗಳೊಂದೆರಡು ಹಾಗು ಸೂರ್ಯಕಾಂತ ಶಿಲೆಗಳಿರುತ್ತವೆ. ಅಲ್ಲದೆ "How to be" ಎಂಬ ಮಾಲೆಯ ಎಲ್ಲ ಗ್ರಂಥಗಳು— How to be a Humourist, How to be an Iconoclast, How to be a Lyric Poet ಮೊದಲಾದವು—ಇರುತ್ತವೆ. ಆದರೆ ಇವುಗಳಿಗಿಂತ ಎದ್ದು ಕಾಣುವ 'How not to be' ಗ್ರಂಥಮಾಲೆಯ 'How not to be a literary Scapegoat,' 'How not to be a Dramatist,' 'How not to be a Novelist' ಮೊದಲಾದ ಗ್ರಂಥಗಳೂ ಮೇಜನ್ನು ಅಲಂಕರಿಸಿರುತ್ತವೆ. ಸಮೀಪದಲ್ಲಿಯೇ ಗೋಡೆಗೆ ಆನಿಸಿದ್ದ ಕಪಾಟನಲ್ಲಿ ಹಿಂದುಸ್ತಾನದ ಎಲ್ಲ ಭಾಷೆಗಳ ಶಬ್ದಕೋಶಗಳೂ, ಯುರೋಪಿನ ಮುಖ್ಯ ಭಾಷೆಗಳ ಶಬ್ದಕೋಶಗಳೂ ಇವೆ. ಅಲ್ಲದೆ ಪ್ರಾಸದ ಕೋಶಗಳು, ಪಡೆಮಾತುಗಳ ಸಂಗ್ರಹಗಳು, ಗಾದೆಮಾತಿನ ಉದ್ಗ್ರಂಥಗಳು, The Standard Elocutionist, Encyclopoedia Britannica, The World's Book of Knowledge, All Knowledge is a nut-shell and a little Knowledge is a bomb-shell, The map of the universe ಮೊದಲಾದ ಜ್ಞಾನಕೋಶಗಳಿವೆ. ಇನ್ನೊಂದು ಮಹತ್ವದ ಗ್ರಂಥವೆಂದರೆ, ರಸ್ಯಾದೇಶದ ಗ್ರಂಥಕಾರನೊಬ್ಬನು ಬರೆದ ವಿಮರ್ಶೆಯ ಇತಿಹಾಸ. (೧) ಕಲ್ಲೊಗೆಯುವ ಕಾಲದ ವಿಮರ್ಶೆ, (೨) ಆಯುಧಗಳನ್ನು ಝಳಪಿಸುವ ಕಾಲದ ವಿಮರ್ಶೆ, (೩) ದುಡ್ಡು ಕೊಡುವ ಕಾಲದ ವಿಮರ್ಶೆ, (೪) ದುಡ್ಡೇ ದೊಡ್ಡಪ್ಪನೆಂಬ ಕಾಲದ ವಿಮರ್ಶೆ, (೫) ದುಡ್ಡು ಕಸಿಯುವ ಕಾಲದ ವಿಮರ್ಶೆ. ಹೀಗೆ ವಿಮರ್ಶೆಯ ಇತಿಹಾಸವನ್ನೊಳಗೊಂಡ ಐದು ಪುಸ್ತಕಗಳಿವೆ.

ಇನ್ನೊಂದು ಸಣ್ಣ ಕಪಾಟದೆ. ಅದರಲ್ಲಿ ರಸಸಿದ್ಧಿಗೆ ಕವಿಗಳನ್ನೊಯ್ದು ಮುಟ್ಟಿಸಬಲ್ಲ ಅನೇಕ ಔಷಧಿಗಳಿವೆ. ಸೋಮರಸ, ದ್ರಾಕ್ಷಾರಸ, ಬೀಯರ, ಪೋರ್ಟ, ವಿಸ್ಕಿ, ಮಧು, ಓಪಿಯಮ್, ಮರ್ಫಾನೀರಾ, ಗಾಂಜಾ, ತಮಾಖುಪತ್ರ, ನಶ್ಯದಪುಡಿ, ನೀಲಗಿರಿ ಎಣ್ಣೆ, ಚಿರೂಟು,—ಇವುಗಳನ್ನೆಲ್ಲ ಕಾಜಿನ ಕಪಾಟನಲ್ಲಿ ಜತನದಿಂದ ಕಾಯ್ದಿಟ್ಟದೆ. ಪ್ರಸಂಗ ಬಂದರೆ ಉಪಯೋಗವಾಗಲೆಂದು ಕ್ಲೋರೋಫಾರ್ಮ, ಸ್ಮೆಲಿಂಗ ಸಾಲ್ಟ, ಹಾಗು ಲಾಫಿಂಗ್ ಗ್ಯಾಸ—ಇವುಗಳ ವ್ಯವಸ್ಥೆಯನ್ನೂ ಮಾಡಲಾಗಿದೆ.

ಗೋಡೆಗಳ ಮೇಲೆ ಅನೇಕ ಪ್ರಸಿದ್ಧ ವಿಮರ್ಶಕರ ಛಾಯಾಚಿತ್ರಗಳಿವೆ. ಒಂದು ಗೋಡೆಯ ಮೇಲೆ ಪ್ಲೇಟೊ, ಎರಿಸ್ಟಾಟಲ್, ಡಾಂಟೆ, ಬಾಯಲೊ, ಲೆಸಿಂಗ, ಸರ್ವ್ಯಾಂಟಿಸ್, ಕ್ರೋಚೆ ಮೊದಲಾದವರ ಚಿತ್ರಗಳಿದ್ದರೆ ಇನ್ನೊಂದರ ಮೇಲೆ ಚಾಸರ, ಸಿಡ್ನಿ, ಬೆನ್‌ಜ್ಯಾನ್ಸನ್, ಡ್ರಾಯಡನ್, ಜಾನ್‌ಸನ್, ಕೋಲರಿಜ್, ಆರ್ನೊಲ್ಡ್, ರಿಚರ್ಡ್ಸ್ ಮೊದಲಾದವರು ಕಂಡುಬರುತ್ತಾರೆ. ಮೂರನೆಯ ಗೋಡೆಯನ್ನು ಟಾಲ್‌ಸ್ಟಾಯ್, ಗಾರ್ಕಿ ಮೊದಲಾದ ರಸಿಯನ್ ಪ್ರಭೃತಿಗಳಿಗೆ ಮೀಸಲಾಗಿಟ್ಟದೆ. ನಾಲ್ಕನೆಯದರ ಮೇಲೆ ಮೆದುಳು, ಕಶೇರುಕಾರಜ್ಜು, ಬ್ರಹ್ಮರಂಧ್ರ, ಹೃತ್ಕಮಲ,—ಇವುಗಳ ಆಕೃತಿಗಳನ್ನೂ ವಿವಿಧ ಯೋಗ ಮುದ್ರೆಗಳ ಮಾದರಿಯನ್ನೂ ತೂಗುಹಾಕಿದೆ. ಇದೇ ಗೋಡೆಯ ಮೇಲೆ ನೃಪತುಂಗ, ಪಂಪ, ರಾಘವಾಂಕ, ಕನಕದಾಸ, ಸರ್ವಜ್ಞ ಮೊದಲಾದ ಪ್ರಸಿದ್ಧ ಕನ್ನಡಿಗರ ಭಾವಚಿತ್ರಗಳಿವೆ. ಪ್ರೇಕ್ಷಕರ ಎದುರಿಗಿನ ಗೋಡೆಯ ಕೆಳಗೆ ಒಂದು ಉದ್ದವಾದ ಸೋಫಾ ವ ಒಂದು ಕುರ್ಚಿ ಇವೆ. ಇವುಗಳ ಹತ್ತಿರ ಒಂದು ರೇಡಿಯೊ ಇಟ್ಟದ್ದಾರೆ.

ಸಮೀಪದಲ್ಲಿಯೇ ದಿನಕರರಾಯನ ಕಂಪೌಂಡರನಾದ ಭೀಮಣ್ಣನಿದ್ದಾನೆ. ಭೀಮಣ್ಣನೂ ದಿನಕರರಾಯನೂ ಲಂಗೋಟ ಗೆಳೆಯರು. ಇಂದು ಭೀಮಣ್ಣನು ಮಾಸಿದ ಧೋತರ ಕೋಟು-ಟೊಪ್ಪಿಗೆಗಳನ್ನು ಧರಿಸಿ ದಿನಕರರಾಯನು ಉತ್ತಮ ರೇಶ್ಮಿ ಸೂಟನಲ್ಲಿದ್ದರೆ,—ಅವರವರ ಹಣೆಬರಹವೇ ಅದಕ್ಕೆ ಕಾರಣ. ಭೀಮಣ್ಣನೂ ಕುರ್ಚಿಯ ಮೇಲೆ ಕುಳಿತಿದ್ದಾನೆ. ಅವನು ಕುಳಿತಲ್ಲಿಯೇ ಗೋಡೆಗೆ ಒಂದು ದೊಡ್ಡ ಪಾಟಿಯಿದೆ.

ತೆರೆಯು ಮೇಲೆದ್ದಾಗ ಭೀಮಣ್ಣನು ಪಾಟಿಯ ಕಡೆಗೆ ನೋಡುತ್ತಿರುತ್ತಾನೆ. ದಿನಕರರಾಯನು "The Critic's Dicta" ಎಂಬ ಮಾಸಿಕದಲ್ಲಿ ಅಚ್ಚಾದ ತನ್ನ ಲೇಖವನ್ನು ಓದುತ್ತ ಕುಳಿತಿರುತ್ತಾನೆ.]

**ದಿನಕರ :—** (ಭೀಮಣ್ಣನ ಕಡೆಗೆ ಮಾಸಿಕವನ್ನು ಮುಂದೆ ಮಾಡಿ) ಇಲ್ಲಿ ನೋಡು ಭೀಮು! ಕಲೆಯನ್ನು ಕುರಿತು ನಾನು ಬರೆದ ಲೇಖನವು ಅಚ್ಚಾಗಿ ಬಂದಿದೆ ಕಲೆಯ ಬಗ್ಗೆ ಜಗತ್ತಿನಲ್ಲಿ ಇನ್ನೂವರೆಗಿದ್ದ ವಿಚಾರಗಳನ್ನೇ ಇದು ಬುಡಮೇಲಾಗಿ ಮಾಡುವದು!

**ಭೀಮು :—** ಅದೇನೋ, ನನಗೆ ಗೊತ್ತಿಲ್ಲ, ಮಹಾರಾಯ. ನನಗೆ ಕಲೆಯೂ ಗೊತ್ತಿಲ್ಲ; ನೆಲೆಯೂ ಗೊತ್ತಿಲ್ಲ. ನೀನು ಡಾಕ್ಟರಾಗಿದ್ದರೆ ನಾನು ಕಂಪೌಂಡರು. ಇಷ್ಟೊಂದು ನನಗೆ ಗೊತ್ತು. ಅಷ್ಟೊಂದು ಒದರಿ ಹೇಳುತ್ತೀ, ಏನು ಬರೆದಿದ್ದೀ ಆ ಮಾಸಿಕದಲ್ಲಿ?

**ದಿನಕರ :—** ಏನೆಂದರೇನು? ಹೊಸ ಸಿದ್ಧಾಂತವನ್ನೇ ಸ್ಥಾಪಿಸಿದ್ದೇನೆ. ಶೇಕ್ಸಪೀಯರನು ಕಲೆಯ ಬಗ್ಗೆ ಹೇಳಿದ, ಭೀಮೂ! "Holding up the mirror to Nature;" ಸೃಷ್ಟಿಯ ಮುಖಕ್ಕೊಯ್ದು ಕನ್ನಡಿಯನ್ನು ಹಿಡಿಯುವದೇ ಕಲೆಯ ಕೆಲಸವಂತೆ! ಇಕಾ, ಈ ಕನ್ನಡಿಯನ್ನು ತೊಗೊ. ಇದರಲ್ಲಿ ನಿನ್ನ ಮೋರೆಯನ್ನು ನೋಡಿಕೋ. ಅದರಲ್ಲೇನು ಕಾಣುತ್ತದೆ?

**ಭೀಮು :—** (ನೋಡಿಕೊಂಡು) ಎಲ! ನಾನು ಲುಕಿಂಗ ಗ್ಲಾಸನ್ನೇ ಕಂಡಿಲ್ಲವೆಂದು ಮಾಡೀಯೇನು? ಅದರಲ್ಲಿ ಕಾಣೋದೇನು ಹೋಳೀಹುಣ್ಣಿಮೆಯೊಳಗೆ ಕೂಡಿಸಿದ ಹುಲುಗಾಮನಂಥ ನನ್ನ ಮುಖ. ಮತ್ತೇನು?

**ದಿನಕರ :—** (ಕನ್ನಡಿಯನ್ನು ಇಸಗೊಂಡು) ಹಾಂ! ನಾ ಹೇಳುವದೂ ಅದನ್ನೇ! ಬರಿ ಕನ್ನಡಿಯನ್ನು ಹಿಡಿದರೆ ಸೌಂದರ್ಯವೆಲ್ಲಿಂದ ಬಂತು? ಅಸ್ಫುಟವಾಗಿದ್ದ ಸೌಂದರ್ಯವನ್ನು ಸ್ಫುಟಗೊಳಿಸಲು ಒಮ್ಮೊಮ್ಮೆ— ಇದೋ! ನೋಡು! ರಾವುಗನ್ನಡಿಯನ್ನು ಹಿಡಿಯಬೇಕು. (ಭೀಮೂನ ಮೋರೆಗೆ ಹಿಡಿಯುತ್ತಾನೆ) ಸಕಲ ಬ್ರಹ್ಮಾಂಡನಾಯಕನಾದ ಸೂರ್ಯನಾರಾಯಣನ ಗೋಲವನ್ನೇ ಬಿಂದುವಾಗಿಸಿ, ಅಸಾಧ್ಯವಾದ ಪ್ರಕಾಶದಿಂದ ಅಪೂರ್ಣತೆಯನ್ನೆಲ್ಲ ಇದೋ! ಈ ಸೂರ್ಯಕಾಂತ ಶಿಲೆಯಂತೆ—ಸುಟ್ಟುಬಿಡಬೇಕು. ಇಲ್ಲಿ ನೋಡು— (ಲೋಲಕವನ್ನೆತ್ತಿ) ಲೋಲಕದಂತಿರಬೇಕು ಕಲೆ! ಜಗತ್ತನ್ನೆಲ್ಲ ಬಣ್ಣಬಣ್ಣವಾಗಿಸಿ ತೋರಿಸಬೇಕು. ಇಕಾ, ನಿನ್ನ ಮೋರೆಯನ್ನೇ ಈ ಲೋಲಕದೊಳಗಿಂದ ನೋಡುತ್ತೇನೆ. ಈಗ ನೀನು ಹೋಳೀಹುಣ್ಣಿಮೆಯ ಹುಲುಗಾಮನಲ್ಲ, ಕಾಮನಬಿಲ್ಲಿನ ಕಾಮ, ಮನ್ಮಥ. ಇದರಂತೆ ಕಲೆಯು ಪ್ರಪಂಚವನ್ನು ದಿವ್ಯವಾಗಿಸಬೇಕು!

**ಭೀಮು :—** ಇದೇ ಏನು ನಿನ್ನ ಸಿದ್ಧಾಂತ! ನೀನು ಲೋಲಕವನ್ನು ಹಿಡಿದರೂ ಅಷ್ಟೆ; ರಾವುಗನ್ನಡಿಯನ್ನು ಹಿಡಿದರೂ ಅಷ್ಟೆ. ನನ್ನ ಸುಟ್ಟು ಕಪಿಮೋರೆ, ಕಪಿಮೋರೆಯಾಗಿಯೇ ಉಳಿಯುತ್ತದೆ.

**ದಿನಕರ :—** ಅಲ್ಲ, ಭೀಮೂ! ನೀನು ಹೇಳುವದು ವಾಸ್ತವವಾದ. ಅದಕ್ಕೂ ಕಲೆಯಲ್ಲಿ ಸ್ಥಾನವಿದೆ. ನಾನು ಮಾತನಾಡುವದು ಕಲೆಯ ವಿಧಾನಗಳ ಬಗ್ಗೆ. ಇದ್ದುದನ್ನು ಇಲ್ಲದಾಗಿಸುವದೂ, ಇಲ್ಲದಿರುವದನ್ನು ಇರುವಂತೆ ಮಾಡುವದೂ ಕವಿಯ ಕರ್ತವ್ಯಗಳಲ್ಲೊಂದಾಗಿದೆ.

**ಭೀಮು :—** ಇಲ್ಲಿ ನೋಡು! ದಿನಕರ, ಒಣರಗಳೆ ಏಕೆ? ಈಗ ನಮ್ಮಲ್ಲಿ ಬಡತನವಿದೆ. ಅದನ್ನು ಇಲ್ಲದಾಗಿಸೋಣ. ನಮ್ಮ ಕಿಸೆಯಲ್ಲಿ ದುಡ್ಡಿಲ್ಲ. ಅದು ಅಲ್ಲ ಝಣಗುಟ್ಟುವಂತೆ ಮಾಡೋಣ. ಇಲ್ಲಿ ನೋಡು, ನೀನು ಹೇಳಿದ ಬೋರ್ಡು ತಯಾರಾಗಿದೆ.

**ದಿನಕರ :—** (ಶಾಂತನಾಗಿ ಟೇಬಲ್ಲಿನ ಮೇಲೆ ಕೈಯೂರಿ ಕುಳಿತು) ಇನ್ನೂ ನಿನಗೆ ಹೇಳುವವನಿದ್ದೆ. Kaleidoscope ನಂತೆ ಕಲೆಯ ಪ್ರಕಾರಗಳು ಅನಂತವಾದುವು; ಚಲಚಿತ್ರಗಳಂತೆ ರೂಪಧ್ವನಿಗಳನ್ನಲ್ಲದೆ ಚೇತನವನ್ನು ಕೊಡುವ ಸಂಜೀವಿನಿಯೇ ಕಲೆಯು. ಇರಲಿ ಓದು ಏನು ಬರೆದಿದ್ದೀ?

**ಭೀಮು :—** (ಓದುತ್ತ)

### ಚಿಕಿತ್ಸೆಗೆ ಫೀ

| | |
|---|---|
| ಮುಖ್ಯಮಾತು | : ಇಲ್ಲಿ ಮಾಫಿ ಸುತರಾಂ ಇಲ್ಲ. |
| ಭಾವಗೀತಾ ಚಿಕಿತ್ಸೆ | : ೧೦ ರೂಪಾಯಿ. |
| ಪ್ರಬಂಧ ಚಿಕಿತ್ಸೆ | : ೧೦ ,, |
| ಲಘುಕಥಾ ನಿವಾರಣೆ | : ೧೦ ,, |
| ಕಾದಂಬರೀ ನಿರೀಕ್ಷೆ | : ೫೦ ,, |
| ನಾಟಕಾವಲೋಕನ | : ೫೦ ,, |
| ಗದ್ಯ ಗ್ರಂಥಗಳು | : ಒಂದೊಂದಕ್ಕೆ ೬೦ ರೂ. |
| ಕಲೋಪಾಸಕನ ಮಸ್ತಕಪರೀಕ್ಷೆ | : ೭೫ ರೂ. |
| ಕಲೋಪಾಸಕನ ಸಮಗ್ರಪರೀಕ್ಷೆ | : ೧೦೦ ರೂ. |

**ದಿನಕರ :—** ಅಡ್ಡಿ ಇಲ್ಲ. ಎಲ್ಲರಿಗೂ ಕಾಣುವಂತೆ ಹೊರಗಿಟ್ಟುಬಿಡು. ಇಕಾ! ಇನ್ನೊಂದು ಮಾತು. ಕವಿಗಳೆಂದರೆ ದುಡ್ಡಿಲ್ಲದ ಜಾತಿ. ನಾನು ವಿಮರ್ಶಕ

ವೈದ್ಯ; ನೀನು ಉಪವೈದ್ಯ. ನಿನ್ನ ಕೋಣೆಯನ್ನು ದಾಟಿ ಬರದ ಹೊರತು ನನ್ನ ಆಫೀಸಿನಲ್ಲಿ ಅವರಿಗೆ ಪ್ರವೇಶ ವಿಲ್ಲ. ಕೈಯಲ್ಲಿ ಫೀ ಬಂದಾಗ ಮಾತ್ರ ಅವರನ್ನು ಒಳಗೆ ಬಿಡಬೇಕು ನೋಡು !

**ಭೀಮು :—** ಅದು ನನಗೆ ಗೊತ್ತಿಲ್ಲೆಂದು ತಿಳಿದ್ಯಾ ! ನಿನ್ನ ಹೊಟ್ಟೆ—ನಿನ್ನ ಹೊಟ್ಟೆಯೊಳಗಿದ್ದ ನನ್ನ ಹೊಟ್ಟೆ—ಇವೆರಡಕ್ಕೂ ಸಲ್ಲಬೇಕಾದ ಹಣವನ್ನು ಕೈಯಲ್ಲಿಡದ ಹೊರತು,—ಕವಿಯಿರಲಿ, ಕಪಿಯಿರಲಿ—ಯಾರನ್ನೂ ಒಳಗೆ ಬಿಡುವದಿಲ್ಲ. ಆದರೆ ಇದೆಲ್ಲ, ವ್ಯವಹಾರ ಹೌದೋ ಅಲ್ಲೋ ನನಗೆ ಸಂಶಯವಿದೆ. ನೀನು ಎಷ್ಟು ಹೇಳಿದರೂ ನನಗೆ ಸಮಾಧಾನವಿಲ್ಲ. ಅಲ್ಲ, ನೀನೇ ನೋಡು. ಹೊಟ್ಟೆ-ಗಾಗಿ ದುಡಿಯುವದನ್ನು ಬಿಟ್ಟು ಜನರು ಕವಿತೆಗಳನ್ನೇಕೆ ಬರೆಯುತ್ತಾರೆ? ಬರೆದು ಹೇಳಿ ಅಷ್ಟಿತಷ್ಟಿ ಬರೆದರೆ,—ನಿನ್ನ ಕಡೆಗೆ ಚಿಕಿತ್ಸೆಗೇಕೆ ಬರುತ್ತಾರೆ?

**ದಿನಕರ :—** ಅಲ್ಲೋ, ಪೆದ್ದ ! ಕಲ್ಲಿಗೆ ಹೇಳಿ ಹೇಳಿ ಹೌದೆನಿಸಬಹುದು. ನಿನ್ನ ಸಂಗತಿ ಕಠಿಣ. ವಕೀಲ ರೆಂದರೆ,—ಕೀಲವಿಲ್ಲದ ಗಾಲಿಯಂತಾಗಿದ್ದಾರೆ. ಡಾಕ್ಟರ ರಾಗಬೇಕೆಂದರೆ,—ಪ್ಲೇಗು, ಸಿಡುಗು, ಗುಪ್ತಸ್ವಾಸ ಜ್ವರ, ಮಾರಿಕಾ,—ಎಲ್ಲ ರೋಗಗಳೂ ದೇಶದಲ್ಲಿ ಕಡಿಮೆ ಯಾಗುತ್ತ ಬಂದವು ಮಾಸ್ತರನಾಗಬೇಕೆಂದರೆ,—ಮಾಸ್ತರರ ಸಂಖ್ಯೆಯೇ ಹುಡುಗರಿಗಿಂತ ಹೆಚ್ಚಾಗಿ ಬೆಳೆದಿದೆ. ಅಂದ ಮೇಲೆ ಕಲಿತವರ ಹೊಟ್ಟೆ ಹೇಗೆ ತುಂಬ ಬೇಕು ? ಹೀಗೆ ಚಿಂತೆಯಲ್ಲಿ ಬಿದ್ದಾಗ—ಕರ್ನಾಟಕದಲ್ಲಿ "ಬರುತಿದೆ ! ಸುಗ್ಗಿ ಬರುತಿದೆ ! ಸಾಹಿತ್ಯದ ಸುಗ್ಗಿ ಬರುತಿದೆ !!" ಎಂದು ಒಂದೆಡೆಗೆ ಓದಿದೆನು. ಆಗ ಝುಗ್ಗನೆ ಮನಸ್ಸಿನಲ್ಲಿ ಹೊಳೆಯಿತು : ಸಾಹಿತ್ಯದಲ್ಲಿ ವಸಂತಮಾಸವು ಬರುವದೆಂದರೆ,—ದೇಶಕ್ಕೆ ಪ್ಲೇಗು ಬಂದಂತೆ. ಪ್ಲೇಗು ಬಂದಾಗ ಡಾಕ್ಟರರು ಧನ್ಯರಾಗುವಂತೆ ಸಾಹಿತ್ಯದ ಮಧುಮಾಸವು ಬಂದಾಗ ವಿಮರ್ಶಕರು ಧನ್ಯರಾಗುತ್ತಾರೆ,—ನನಕೋಟಿ ನಾರಾಯಣರಾಗುತ್ತಾರೆ. ಅದಕ್ಕಾಗಿ ಬಿ. ಎ ಆಗಿದ್ದ ನಾನು ಇದ್ದ ಬಿದ್ದ ಆಸ್ತಿಯನ್ನೆಲ್ಲ ಮಾರಿ ರಸ್ಯಾ ದೇಶಕ್ಕೆ ಹೋಗಿ "Doctor of Literary Criticism" 'ವಿಮರ್ಶಾ ಶಾಸ್ತ್ರಜ್ಞ'ನೆಂಬ ಡಿಗ್ರಿ ಸಂಪಾದಿಸಿಕೊಂಡು ಬಂದೆ. ಅಲ್ಲಿಯ ಸಮತಾವಾದವನ್ನೂ ಕಲಿತೆನೆನ್ನು. ಆದರೆ ಹಿಂದುಸ್ಥಾನದಲ್ಲಿ ಅದನ್ನು ಆಚರಿಸುವದು ಹೇಗೆ? ಶ್ರೀಮಂತರಂತೆ ಎಲ್ಲರೂ ಶ್ರೀಮಂತರಾಗಬೇಕೇ ಹೊರತು ಬಡವರಂತೆ ಎಲ್ಲರೂ ಬಡವರಾಗಬಾರದು. ಅದಕ್ಕಾಗಿ ಇಲ್ಲಿ ಪ್ರ್ಯಾಕ್ಟಿಸ್ ಮಾಡಬೇಕೆಂದು ನಿಶ್ಚಯಿಸಿ ನಿನಗೆ ತಿಳಿಸಿದೆ. ನನ್ನ ಉಪವೈದ್ಯನಾಗಲೊಪ್ಪಿ ನೀನು ನನ್ನ ಎಲ್ಲ ಪ್ರಶಂಸೆಗಳನ್ನು ಬತ್ತಿ ಹೇಳಿ "ಬರುವರು, ಬರುವರು !" ಎಂದು ವರ್ತಮಾನಪತ್ರಗಳಲ್ಲಿಯೂ, ಶಾಲೆಗೆ ಹೋಗುವ ಹುಡುಗರ ಹಣೆಯ ಮೇಲೂ, ಆಕಾಶ ಬುಟ್ಟಿಯಂಥ ವಿಮಾನಗಳ ತಳಕ್ಕೂ ಬರೆಯಿಸಿದೆ. ಹೀಗೆ ನನ್ನ ಆಗಮನವು ಕರ್ನಾಟಕದಲ್ಲೆಲ್ಲ ಡಾಣಾಡಂಗುರ ವಾಗಿದೆ. ಇನ್ನೇನು ? ನನಗೂ ನಿನಗೂ ಪುರಸತ್ತಿಲ್ಲದಂತೆ ಕೆಲಸ ಬರುವದು, ಭೀಮೂ !

**ಭೀಮು :—** ಅದೆಲ್ಲ ನಿಜ, ದಿನಕರ. ಆದರೆ ಜನರಿಗೆ ನಿನ್ನ ವಿದ್ವತ್ತೆಯ ಅನುಭವ ಬಂದು ಅವರಿಗೆ ನಿನ್ನ ಕೈ ಗುಣದ ಬಗ್ಗೆ ಖಾತ್ರಿಯಾಗದ ಹೊರತು....

**ದಿನಕರ :—** ಛೀ ಮಳ್ಳೇ ! ಸಾಕುಮಾಡು. ಇಂದು— ಮೊದಲನೆಯ ದಿನ. ಚಿಕಿತ್ಸೆಯನ್ನು ನಾನು ಪುಕ್ಕಟೆ ಯಾಗಿಟ್ಟ ಕಾರಣವೇನು ? ಇಂದು ನನ್ನ ಸಲಹೆಯನ್ನು ಪಡೆಯಲು ಬಂದವರೆಲ್ಲ ನನ್ನ ಜಾಹೀರಾತುಗಳೆಂದು ತಿಳಿ. ಅಲ್ಲದೆ ನಿನಗೆ ಹೇಳಿಲ್ಲವೆ, ಇವತ್ತು ಹಾಗು ನಾಳೆ ಆಸ್ಪತ್ರಿಯ ಮುಂದೆ ಹಾಯ್ದುಹೋಗುವ ಪ್ರಸಿದ್ಧ ಸಾಹಿತಿಗಳನ್ನೆಲ್ಲ ನಿನಾದರೊಂದು ನೆವಮಾಡಿ ನನ್ನ ಕಡೆಗೆ ಕರಕೊಂಡು ಬರಲು ? ಮತ್ತೆ, ಇಲ್ಲಿ ನೋಡು ! ಅವರಿಗೆ ಫೀ ಚಾರ್ಜ ಮಾಡಬೇಡ.

ಭೀಮು :— ( ಗಡಿಬಿಡಿಯಿಂದೆದ್ದು ) ದಿನಕರ, ಒಬ್ಬ ಕವಿಗಳು ಇತ್ತ ಕಡೆಗೇ ಬರುತ್ತಿರುವರು. ಪರಮ ಪಂಡಿತ ರಾದ ನೀಲಕಂಠ ಶಾಸ್ತ್ರಿಗಳವರು. ನಿನ್ನಂಥ ಮ್ಲೇಂಛನ ಕಡೆಗೆ ಬರುವರೇಕೋ ಕಾಣೆ.

**ದಿನಕರ :—** ನಾನೇಕೆ ಮ್ಲೇಂಛ ? I am a Vaishnava of the fiist water ಮರಗಳಲ್ಲಿಯ ಅಗ್ರ ತೀರ್ಥವೇ ನನ್ನದು !

**ಭೀಮು :—** ಇರಲಿ ಜಡೋ, ತುರುಕ ! ಹೀಗೆ ಬನ್ನಿರಿ, ಶಾಸ್ತ್ರಿಗಳೇ ! ನಮಸ್ಕಾರ ! ( ನಮಸ್ಕರಿಸುತ್ತಾನೆ. )

[ ಶಾಸ್ತ್ರಿಗಳು ನೀಲಿ ಶಾಲನ್ನು ಹೊತ್ತು ಧೋತರವನ್ನುಟ್ಟಿರುತ್ತಾರೆ. ಹಣೆಯಲ್ಲಿ ಭವ್ಯವಾದ ಅದ್ವೈತೀ ಗಂಧವಿದೆ. ಕೈಯಲ್ಲಿ ಪುರಾಣದ ಗಂಟಿನಂತೆ ಕಟ್ಟಿದ ಮಹಾಗಂಟಿನಲ್ಲಿ ಅವರ ಕಾವ್ಯಗಳ ಹಸ್ತಪ್ರತಿಗಳಿವೆ. ]

**ಶಾಸ್ತ್ರಿಗಳು :—** ( ಬಂದು ) ದೀರ್ಘಾಯುಷೀ ಭವ ! ಅಲ್ಲೋ ! ಡಾಕ್ಟರಸಾಹೇಬರೆಲ್ಲಿ ?

**ಭೀಮು :—** ಇಲ್ಲೇ ಇದ್ದಾರೆ ಶಾಸ್ತ್ರಿಗಳೇ! ಇದೇನು? ಕೈಯಲ್ಲಿ ಕಿಷ್ಕಿಂಧಾಪುರಿ! ಇಲ್ಲಿ ಕೊಡಿರಿ.

**ಶಾಸ್ತ್ರಿ :—** (ಗಂಟು ಕೊಟ್ಟು) ನಮಸ್ಕಾರ, ಡಾಕ್ಟರ ಸಾಹೇಬ್!

**ದಿನಕರ :—** (ಎದ್ದು) ನಮಸ್ಕಾರ! ಇಲ್ಲಿ, ಹೀಗೆ ಕುಳಿತುಕೊಳ್ಳಬೇಕು ಶಾಸ್ತ್ರಿಗಳು. (ಇಬ್ಬರೂ ಕೂತುಕೊಳ್ಳುತ್ತಾರೆ)

**ಶಾಸ್ತ್ರಿ :—** ಒಳ್ಳೇ ಕಂಪೌಂಡರರ ಮುಂಡೇಗಂಡನ್ನ ದೊರಕಿಸಿದ್ದೀರಿ ನೀವು, ರಾಯಸಾಹೇಬ್? ಭೀಮಣ್ಣ ಮನೆತನಸ್ಥ, ದೇವರು-ದಿಂಡರಲ್ಲಿ ವಿಶ್ವಾಸವುಳ್ಳವ.

**ದಿನಕರ :—** ಹೌದು ಶಾಸ್ತ್ರಿಗಳೇ! ಇಲ್ಲದಿದ್ದರೆ ನಮ್ಮ ಕೆಲಸವು ಹೇಗೆ..(ಭೀಮಣ್ಣನು 'ಚುಪ್' ಎಂದು ಸನ್ನೆ ಮಾಡುತ್ತಾನೆ ಅದನ್ನು ನೋಡಿ ದಿನಕರನು ವಿಷಯಾಂತರಿಸುತ್ತಾನೆ.) ಮತ್ತೆ ಈಗ ನೀವು ಬಂದ ಕೆಲಸವಾವುದು ಶಾಸ್ತ್ರಿಗಳೇ?

**ಶಾಸ್ತ್ರಿ :—** (ನಿಟ್ಟುಸಿರು ಬಿಟ್ಟು) ಅದೇನು ಹೇಳಲಿ, ಡಾಕ್ಟರಸಾಹೇಬ್! (ಭೀಮಣ್ಣನ ಎದುರಿಗಿಟ್ಟ ಗಂಟನ್ನು ಬಿಚ್ಚುತ್ತ) ಇವತ್ತಿನ ನಾಲ್ಕು ಹುಡುಗರು ಕೂಡಿ ಕನ್ನಡವನ್ನೆಲ್ಲ ಹಾಳುಮಾಡಿಬಿಡುತ್ತಾರೆ. ಹರಕು-ಮುರುಕು ಧಾಟಿಯಲ್ಲಿ ಹುರುಕು-ಬರುಕು ಕನ್ನಡವನ್ನು ಹಾಕುತ್ತಾರೆ. ತಲೆಯ ಮೇಲಿನ ಮೂಸ ಹಾರಿಲ್ಲ, ಇವರ ಉರವಣಿಗೆ ಇಷ್ಟು! ಆದರೆ ತಾವು ಯೋಗ್ಯತೆಯುಳ್ಳವರು. ಸಾಕ್ಷಾತ್ ಪರದೇಶಕ್ಕೆ ಹೋಗಿ ಬಂದವರು. ಸತ್ವಾಸತ್ವವನ್ನು ಬಲ್ಲವರು. ತಾವು ನನ್ನ ಕೃತಿಗಳನ್ನು ನೋಡಿ ಅಭಿಪ್ರಾಯ ಕೊಟ್ಟರೆ....

**ದಿನಕರ :—** ಭೀಮೂ ಇಲ್ಲೇಕೆ ನಿಂತೆ? ಹೋಗು ನಿನ್ನ ಕೋಣೆಗೆ. ಶಾಸ್ತ್ರಿಗಳ ಕೆಲಸ ಮುಗಿಯದ ಹೊರತು ಮತ್ತೆ ಯಾರನ್ನೂ ಒಳಗೆ ಬಿಡಬೇಡ.

(ಭೀಮು ರಂಗಭೂಮಿಯ ಎಡಬದಿಯಿಂದ ತನ್ನ ಕೋಣೆಗೆ ಹೋಗುತ್ತಾನೆ. ದಿನಕರರಾಯನು ಶಾಸ್ತ್ರಿಗಳ ಕಡೆಗೆ ತಿರುಗಿ—)

ಓಹೋ! ಅವಶ್ಯವಾಗಿ, ಶಾಸ್ತ್ರಿಗಳೆ,! ಆದರೆ ಅಷ್ಟೆಲ್ಲ ನನ್ನಿಂದ ಓದುವದಾಗದು. ಮೇಲಾಗಿ ಇನ್ನೊಂದು ಮಾತು ಹೇಳುತ್ತೇನೆ. ನನ್ನಿಂದ ಚಿಕಿತ್ಸೆ ಬೇಕೆನ್ನುವವರು ತಾವೇ ತಮ್ಮ ಕೃತಿಗಳನ್ನು ಓದಬೇಕು. ಕವಿಯ ಧ್ವನಿ ತರಂಗ, ಹಾವಭಾವ, ಮುಖಮುದ್ರೆ,—ಇವೂ ಇಂತಹ ಚಿಕಿತ್ಸೆಯಲ್ಲಿ ಅವನ ಕೃತಿಯಷ್ಟೇ ಮಹತ್ವವುಳ್ಳವು.

**ಶಾಸ್ತ್ರಿ :—** ಆಗಲಿ ಓದುತ್ತೇನೆ. 'ಕಲಿಪ್ರವೇಶ' ವೆಂಬ ನನ್ನ ಅಖಂಡ ಕಾವ್ಯವನ್ನು ಓದಲೋ?

**ದಿನಕರ :—** ಬೇಡ, ಒಂದು ಖಂಡ ಕಾವ್ಯವನ್ನೋದಿರಿ. ಅಗಳು ಹಿಚಿಕಿದರೆ ಅನ್ನದ ರುಚಿ ತಿಳಿಯುವದಿಲ್ಲವೆ ಶಾಸ್ತ್ರಿಗಳೇ?

**ಶಾಸ್ತ್ರಿ:—** ಹಾಗೇ ಆಗಲಿ 'ವತ್ಸನ ಮಾತೃಶೋಧ' ಎಂಬ ಖಂಡಕಾವ್ಯವನ್ನೋದುತ್ತೇನೆ.

(ಕೆಕರಿಸಿ ಶಾಸ್ತ್ರಿಗಳು ಓದಲುದ್ಯುಕ್ತರಾಗುತ್ತಾರೆ. ಲೋಲಕವನ್ನು ಕಣ್ಣೆದುರಿಗೆ ಹಿಡಿದು ದಿನಕರರಾಯನು ಅವರನ್ನು ನೋಡಲು ಪ್ರಾರಂಭಿಸುತ್ತಾನೆ)

ತಂತೋ ತಂತವೊ ತಂತುನಾಭ ತರಲಂ ತನ್‌ತಂತು
ತಂತ್ರೋತ್ತಮಾ ॥
ಮೆಂತುಂ ಪಂತಿನ ಯಂತ್ರದೊಳ್ ಸಿಲುಕಿ ತಾಂ
ತಂತ್ರಿಪ್ರಸುಂ ಸಂತತಂ।
ಎಂತುಂ ಬಂದಿತು ಸಂತೆಯೊಂದು ಸತತಂ ಥಾನಂ ವಿ-
ತಾನಂ ತತಂ।
ಸಂತಂ ಸಂತತಿ ಸ್ವಾಸ್ಥ್ಯ ಸ್ವಾಂತನತಿದಾಂತಂ
ತಂತುಕೃದ್—ವರ್ತಿಪಂ ॥

ಇಂತುಂ ಶಾಂತಚಿತ್ತದಿಂ ಶಾರ್ದೂಲವಿಕ್ರೀಡತದಿಂ—ಸ್ವೀಕೃತ ಕಾವ್ಯ ಕಾರ್ಯದ ಪುಣ್ಯಾಹವಚನಮಂ ಪೂರೈಸಿಕೊಂಡುಂ, ಸ್ವಮಾತೃವಿನ ಸಂಶೋಧನಮುಂ ಕೈಕೊಂಡುಂ ಕಿಂಸಂಶೋಧ್ಯ ಮೂಢನಾದ ವತ್ಸಂ......

**ದಿನಕರ:—** ಕಿಂಸಂಶೋಧ್ಯ ಮೂಢನಾರು? ನೀವೋ ವತ್ಸನೋ, ಶಾಸ್ತ್ರಿಗಳೇ?

**ಶಾಸ್ತ್ರಿ:—** ಛೇ! ಛೇ! ಶಾಂತಂ, ಪಾಪಂ! ಮೌಢ್ಯವೆಲ್ಲ ನನ್ನದು,—ಅಲ್ಲ, ಅಲ್ಲ,—ವತ್ಸನದು; ಕಾವ್ಯವೆಲ್ಲ ನನ್ನದು, ಡಾಕ್ಟರಸಾಹೇಬ್! ಮುಂದೆ ಕೇಳಿರಿ! ಕಿಂಸಂಶೋಧ್ಯ ಮೂಢನಾದ ವತ್ಸಂ:—

ಹಾ! ಪ್ರಮಾದಂ! ಪ್ರಮದಾ ಪ್ರಮೋದಂ ಗತಿಸಿತೇ
ಮಾತೃವದನಂ।
ಅಪ್ರಮಾಣಂ ಮಮ ಮಾತೃದೇಹಂ ತೊರೆಯಿತೇ
ಪುತ್ರಸದನಂ।
ವಿಪ್ರಯೋಗಂ ಶರದಾಪ್ರಯೋಗಂ ಮಸಗಿತೇ ದುಃಖ
ಕದನಂ।
ಸಪ್ರಮಾಣಂ ಕಥಿಪೆಂ ಕಠೋರಂ ಮರೆತಳಾ ಕುಂದರದನೆ॥

**ದಿನಕರ:—** ನಿಮ್ಮ ವೃತ್ತಗಳ ಹಣೆಬರಹ ತಿಳಿಯಿತು. ಮುಂದೆ ರಗಳೆ ಕಂದಗಳಲ್ಲೇನಾದರೂ ಬರೆದಿದ್ದೀರಾ ?

**ಶಾಸ್ತ್ರಿ :—** (ಸಿಟ್ಟಿಗೆದ್ದು) ಹಾಗೆ ನಡುವೆ ಪ್ರಶ್ನೆ ಕೇಳ ಬೇಡಿರಿ, ಡಾಕ್ಟರ್, ಈಗ ನನಗೆ ಆವೇಶ ಬಂದಿದೆ. (ಎದ್ದು) “ಇಂತುಂ ವತ್ಸಂ ತಾಂ ತರಳನಾಗಿಯುಂ ಗರಳಮಂ ಕುಡಿದ ಹರಹರನಪರಾವತಾರಮೆಂಬಂತೆ ಮರಮರಕೆ ಕೈ ಸಾರ್ಚಿ

**ವಿಹಂಗಂಗಳೀ ಕಾಡು ಮಂಗಂಗಳೀ ಗಾ- |**
**ಡಿಯಂಗಂಗಳೀ ಜೋಡು ಹಂಗಂಗಳೀ ಭೂ- |**
**ರುಹಂಗಾಂಗಕೇ ನೀಡಿ ಶೃಂಗಾರಮಂ ತಾ- |**
**ಯುಹಂಗಂ ಮನೋಜ್ಞಂಗೆ ಭಂಗಿಪ್ಪವಯ್ಯೋ ||**

ಇನಿತಾದರುಂ ಮಾತೆಯು ಬಾರದೊಡೆ,

**ಗಳಗಳ, ಗಳಗಳ, ಗಳಗಳ |**
**ನಳುತಂ ಮಳೆಗಾಲದಾರ್ಪ ಗಿಳಿಗಳ ತೆರದಿಂ |**
**ದಳದಳ, ದಳದಳ, ದಳದಳ |**
**ನೀಳಸುತ ಮಳೆಗಾಲ ಮೋಡಮೆನಿಸುವ ತೆರನಂ ||”**

**ದಿನಕರ :—** (ಎದ್ದು ಕೋಣೆಯ ತುಂಬ ತಿರುಗಾಡುತ್ತ) ಶಾಸ್ತ್ರಿಗಳೇ! ಈ ನಿಮ್ಮ ಅಳದಕ್ಕಿಯನ್ನು ನಿಲ್ಲಿಸಿರಿ. ಇದಕ್ಕೋ ನೀವು ಕವಿತೆಯೆನ್ನುವದು ? ಉಳಿದ ದಿನಗಳಾಗಿದ್ದರೆ ನೀವು ಎಪ್ಪತ್ತೈದು ರೂಪಾಯಿ ಕೊಟ್ಟು ನಿಮ್ಮ ಮಸ್ತಕ ಪರೀಕ್ಷೆಯಾಗದೆ ಸಾತಿಲ್ಲವೆಂದು ಹೇಳುತ್ತಿದ್ದೆ. ಇಂದು ಎಲ್ಲವೂ ಧರ್ಮಾರ್ಥವಾಗಿದೆ. ಅದಕ್ಕಾಗಿಯೇ ನಿಮಗೆ ಔಷಧವನ್ನು ಪುಕ್ಕಟೆಯಾಗಿ ಹೇಳುತ್ತೇನೆ. ಪುನರ್ಜನ್ಮವು ಬರುವ ತನಕ ಕವಿಯಾಗುವ ಆಶೆಯನ್ನು ನೀವು ಬಿಟ್ಟುಬಿಡಿರಿ. ಆದರೆ ಒಂದೇ ಜನ್ಮದಲ್ಲಿ ಕುರುಬನು ಕಾಳಿದಾಸನಾದನು. ಬಯಸಿದರೆ ನಿಮ್ಮಲ್ಲಿಯೂ ಹೀಗೆ ಕ್ರಾಂತಿಯಾಗಬಹುದು. ನಿಮ್ಮ ಮೆದುಳಿನಲ್ಲಿ ಕಾವ್ಯಲಕ್ಷ್ಮಿಯು ಇದೇ ಜನ್ಮದಲ್ಲಿ ನಿಲ್ಲಬೇಕೆಂದಿದ್ದರೆ,—ಇಬ್ಸೆನ್, ಬರ್ನಾರ್ಡ ಶಾ,—ಬರ್ಟ್ರಂಡ ರಸೆಲ್, ಡಿ. ಎಚ್. ಲಾರೆನ್ಸ್—ಇವರ ಗ್ರಂಥಗಳನ್ನೋದಿರಿ. ವಿಟ್‌ಮನ್ ಹಾಗೂ ಜೆರರ್ಡ್ ಹಾಪಕಿನ್ಸ್ ಇವರ ಛಂದಸ್ಸನ್ನು ಪ್ರತಿನಿತ್ಯ ಪಠಿಸಿರಿ. ಇಲ್ಲದಿದ್ದರೆ ಆ ನಿಮ್ಮ “ಹಂಗಂಗಳೀ ಕಾಡು ಮಂಗಂಗಳೀ” ಎಂದು ಮಂಗನಂತೆ ಕಿರಚುತ್ತ, “ಗಳಗಳ, ಗಳಗಳ, ಗಳಗಳ” ಎಂದು ಅಳುತ್ತ ನಿರಂತರವಾಗಿ ಕೊಳೆಯಿರಿ! ನಡೆಯಿರಿಲ್ಲಿಂದ! ಭೀಮೂ, ಇವರಿಗೆ ಹಾದೀ ತೋರಿಸು! (ಭೀಮು ಬರುತ್ತಾನೆ)

**ಶಾಸ್ತ್ರಿ :—** ನೀಚಾ! ನಿನಗೂ ಆ ಚಂಡಾಳ ಚೌಕಡಿಯ ಪಿಶಾಚ ಬಡೆದಿದೆ. ಹೊರಟೆ, ಇಲ್ಲಿಂದ ಹೊರಟೆ. ಭೀಮಣ್ಣಾ, ಇಂಥ ವ್ರಾತ್ಯನ ಚಾಕರಿಗೆ ನೀನು ನಿಲ್ಲಬೇಕೇ ?

**ಭೀಮಣ್ಣ :—** ಶಾಸ್ತ್ರಿಗಳೇ! ನಿಮಗೆ ದೂರಿನಿಂದ ನಮಸ್ಕಾರ. ನನ್ನೊಡನೆ ಹೆಚ್ಚು ಮಾತಾಡಿ ನನ್ನ ಹೊಟ್ಟೆಯ ಮೇಲೆ ಕಾಲು ಕೊಡಬೇಡಿರಿ.

(ಶಾಸ್ತ್ರಿಗಳು ಹೋಗುತ್ತಾರೆ. ಭೀಮಣ್ಣನು ತನ್ನ ಕೋಣೆಗೆ ಹೋಗುತ್ತಾನೆ... ಹೋಗಿ ಬಂದು,—).

ಕೊಳ್ಳಿ ಎಂಬ ಮಾಸ್ತರು ಬಂದಿದ್ದಾರೆ. ಒಳಗೆ ಬಿಡಲೋ ?

**ದಿನಕರ :—** (ಬರೆಯುತ್ತ ಕೂತಾಗ ತಲೆಯೆತ್ತಿ) ಓಹೋ! ಅಗತ್ಯವಾಗಿ !

(ಒಂದೇಸವನೆ ಇಪ್ಪತ್ತು ವರ್ಷ ಉಪಯೋಗಿಸಿ ಹರಹರಿದ ಉದ್ದ ಕೋಟೊಂದನ್ನು ಹಾಕಿ ಹಡಿಗೆ-ಪಾವಡ ಸುತ್ತಿದ ಟ್ರೇ. ಕಾ. ಮಾಸ್ತರರು ಬರುತ್ತಾರೆ. ಅವರ ಮೋರೆಯ ಬಣ್ಣವೂ ಇದ್ದಲಿಯ ಬಣ್ಣವೂ ಒಂದೇ ಎಂದು ಹೇಳಬೇಕಾಗುತ್ತದೆ. ದಾರದಿಂದ ಕಟ್ಟಿ ಗುಂಡಿಯ ತೂತಿನೊಳಗಿಂದ ಹಾಯಿಸಿ ತ್ರೇತಾಯುಗದ ಗಡಿಯಾರವೊಂದನ್ನು ಅವರು ಕಿಸೆಯಲ್ಲಿ ಎಸೆದಿದ್ದಾರೆ. ಅವರು ಉಟ್ಟ ಕಿರಿದೋತರವು ಅಷ್ಟಿಷ್ಟು ಮಾಸಿದೆಯೆಂದು ಹೇಳಲಿಕ್ಕಾಗುವದಿಲ್ಲ. ಅಕಸ್ಮಾತ್ತಾಗಿ ಮಾಸ್ತರರು ಸಮುದ್ರದಲ್ಲಿ ಮುಳುಗಿದರೆ,—ಅವರ ಧೋತರದಿಂದ ಸಮುದ್ರದ ನೀರಿಗೇ ಬಣ್ಣ ಬರಬಹುದು. ಹೊಲದಲ್ಲಿ ಕೆಲಸಮಾಡುವ ಒಕ್ಕಲಿಗರು ಉಪಯೋಗಿಸುವ ಎಟ್ಟ ಎಕ್ಕಡಗಳನ್ನು ಮಾಸ್ತರರು ಮೆಟ್ಟಿದ್ದಾರೆ.)

**ಮಾಸ್ತರು :—** ನಮಸ್ಕಾರ ಡಾಕ್ಟರಸಾಹೇಬ !

**ಡಾಕ್ಟರು :—** ನಮಸ್ಕಾರ, ಇಲ್ಲಿ ಹೀಗೆ ಬನ್ನಿರಿ ಕೊಳ್ಳಿ ಮಾಸ್ತರೆ! ಇಲ್ಲಿದೆ ಖುರ್ಚಿ,—ಅಲ್ಲಿ ಕೆಳಗೇಕೆ ಕೂಡುತ್ತೀರಿ ?

**ಮಾಸ್ತರು :—** (ವಿನಯದಿಂದ) ಅಲ್ಲ.... ಖುರ್ಚಿಯ ಮೇಲೆ ತಾವು. ನಾನು ಬಡ ಮಾಸ್ತರ, ನನಗೇಕೆ ಖುರ್ಚಿ..

**ಡಾಕ್ಟರು :—** ಛೇ! ಛೇ! ಈ ಸುಳ್ಳು ವಿನಯವೇಕೆ ? ಖುರ್ಚಿಯ ಮೇಲೆ ಕೂಡುವದರಲ್ಲಿಯೇ ದೊಡ್ಡಿಸ್ತಿಕೆಯಿದ್ದರೆ ಕಾರಕೂನರೆಲ್ಲ ಕಲೆಕ್ಟರರಾಗುತ್ತಿದ್ದರು. ಇಲ್ಲಿ ಕೂಡಿರಿ ಹೀಗೆ.

**ಮಾಸ್ತರು :—** ಅಲ್ಲಾ, ನಾನೊಂದು ಕವಿತೆ ಓದಿ ತೋರಿಸಬೇಕೆಂತಾ....

**ಡಾಕ್ಟರು :—** ನಿಮ್ಮ ಹೆಸರೇನು ಮಾಸ್ತರೇ ?

**ಮಾಸ್ತರು :—** ಕೊಳ್ಳಿ.

**ಡಾಕ್ಟರು**:— ಏನು ಕಲಿಸುತ್ತೀರಿ, ನೀವು ?

**ಮಾಸ್ತರು**:— ಕ. ಕಾ. ಮೊದಲಾದವುಗಳ—ಬಳ್ಳಿ.

**ಡಾಕ್ಟರು**:— ನೀವಿರುವದೆಲ್ಲಿ ?

**ಮಾಸ್ತರು**:—( ಉತ್ಸಾಹದಿಂದ ) ಪಸಂಘೆಯ ಮೇಲಿನ ಹನುಮನ ಹಳ್ಳಿ !

**ಡಾಕ್ಟರು**:— ವಾಹವಾ! ಮಹಾಸ್ತರೇ! ಬರಿ ನಿಮ್ಮ ಮಾತೇ ಇಷ್ಟೊಂದು ಕಾವ್ಯಮಯವಾಗಿದ್ದಲ್ಲಿ,— ನಿಮ್ಮ ಕಾವ್ಯದಲ್ಲಿ ಎಷ್ಟು ಶಬ್ದಗಳು ತುಂಬಿವೆಯೋ ಏನೋ! ನೀವು ಟ್ರೇನಿಂಗ ಕಾಲೇಜಿನಲ್ಲಿ ಕಲಿತಂತೆ ಕಾಣುತ್ತದೆ ?

**ಮಾಸ್ತರು**:— ಹೌದು. ಹೆಂ. ಟ್ರೇ. ಕಾ. ಗಂ. ಟ್ರೇ. ಕಾ ;—ಎರಡರದೂ ಸಂಬಂಧವಿದೆ.

**ಡಾಕ್ಟರು**:— ಅಂದರೇನು, ಮಾಸ್ತರೆ?

**ಮಾಸ್ತರು**:— ಇವು ನಮ್ಮಲ್ಲಿಯ ಕೋಡುಶಬ್ದ, ಡಾಕ್ಟರಸಾಹೇಬ. 'ನಮ್ಮ ಕವಿಗಳೆಂಬ ಕೋಡು ತಲೆಗದಾವುದು' ಎಂದು ಒಬ್ಬ ಕಲಿತ ಕವಿಗಳು ಬರೆದಿದ್ದಾರಲ್ಲ,— ನಮ್ಮ ಹೆಸರಿಗೆ ಕೋಡಿನಂಥ ಕಟ್ಟು ಅದು. ಅದರ ಅರ್ಥ ಇಷ್ಟೆ! ಗಂ. ಟ್ರೇ. ಕಾ. ದಲ್ಲಿ,—ಅಂದರೆ ಗಂಡು ಹುಡುಗರ ಟ್ರೇನಿಂಗ ಕಾಲೇಜಿನಲ್ಲಿ ನಾನು ವಿದ್ಯಾರ್ಥಿಯಾಗಿದ್ದೆ. ಹೆಂ. ಟ್ರೇ. ಕಾ. ಕ್ಕೆ ಹೊಂದಿಕೊಂಡ ಸಾಲೆಯಲ್ಲಿ ನಾನು ಶಿಕ್ಷಕನಾಗಿದ್ದೇನೆ.

**ಡಾಕ್ಟರು**:— ಇದು ನಿಮ್ಮ ವಿಷಯವಾಯಿತು. ಕವಿತೆಯನ್ನು ಯಾರ ವಿಷಯವಾಗಿ ಬರೆದಿದ್ದೀರಿ. ?

**ಮಾಸ್ತರು**:— 'ಪಲಾಂಡು ಕನ್ಯಾಪಹರಣ' ವೆಂಬ ಚಿಕ್ಕ ಕಾವ್ಯವನ್ನು ಭಾಮಿನಿಯಲ್ಲಿ ಬರೆದಿದ್ದೇನೆ. ಡಾಕ್ಟರಸಾಹೇಬ್ !

**ಡಾಕ್ಟರು**:— ( ನಗುತ್ತ ) ಆಗಲಿ, ಓದಿ ಹೇಳಿರಿ ಒಂದೆರಡು ಪದ್ಯಗಳನ್ನು.

( ಮಾಸ್ತರು ದಾರದ ಪಾರ್ಶ್ವಗಳುಳ್ಳ ಕನ್ನಡಕಗಳನ್ನು ಧರಿಸಿ ಆ ಕನ್ನಡಕಗಳ ಸಂದಿಯೊಳಗಿಂದ ನೋಡುತ್ತ ಓದತೊಡಗುತ್ತಾರೆ. ರಾವುಗನ್ನಡಿಯ ತುಣುಕಿನೊಳಗಿಂದ ದಿನಕರರಾಯನು ಅವರನ್ನು ನೋಡುತ್ತಿರುತ್ತಾನೆ. )

**ಮೊಟ್ಟಮೊದಲು ಪಲಾಂಡು ಕನ್ಯೆಯು |**
**ಪಟ್ಟ ಕಸವಿಸಿಯನ್ನು ಪೇಳುವೆ |**
**ಕಟ್ಟಿದೆಯ ಕನ್ನಡಿಗರಿಂದ ನಿಟ್ಟುರಿದು ಕೇಳುವದು ||**

**ಹೊಟ್ಟೆಯುರಿಯುವ ಹಿಟ್ಲರಾಸುರ |**
**ನೆಟ್ಟ ನೋಟವ ಕಿತ್ತಲಾರದೆ |**
**ಗಟ್ಟಿ ಮಾತಿದು ನೆಟ್ಟನೊಯ್ಯುವೆ ಚೆಲುವ ಕನ್ಯೆಯನು ||**

**ಝಪ್ಪಲೀನಾಸ್ತ್ರವನು ಜಪ್ಪಿಸಿ |**
**ಅಪ್ಪಳಿಸಿ ಜಡಿಯನ್ನು ಹಿಟ್ಲರ |**
**ಕುಪ್ಪಳಿಸಿ ಸೈನಿಕರ ಕೊಪ್ಪವ ಜಂಬದಲಿ ನುಡಿದ ||**

**ಚಪ್ಪಲಿಯ ಮೆಟ್ಟಿರುವ ಕನ್ಯೆಯು—|**
**ಕುಪ್ಪಸದ ಬದಲಿತ್ತು ಪೋಲಕ—|**
**ತೆಪ್ಪಗಾದಳು ತಪ್ಪಿತಸ್ಥಳ ತೆರದಿ ರೋದಿಸುತ ||**

**ದಿನಕರ**:— ಇದೇನು, ಮಾಸ್ತರೇ ! ಹಿಟ್ಲರಾಸುರನ ಪುರಾಣವನ್ನು ಬರೆದು ಬಿಟ್ಟಿದ್ದೀರಲ್ಲಾ !

**ಮಾಸ್ತರ**:— ( ಶಾಂತೋಲ್ಲಾಸದಿಂದ ) ಹೌದು, ಡಾಕ್ಟರಸಾಹೇಬ್ ! ಮತ್ತೆ ತಮ್ಮಂಥವರು ಹೊಸ ಹೊಸ ಕಾವ್ಯವಸ್ತುಗಳನ್ನು ಆರಿಸಿಕೊಳ್ಳಬೇಕೆಂದು ಹೇಳುತ್ತೀರಲ್ಲ ! ನಾನೂ ನನ್ನ ಅಳಿಲುಸೇವೆಯನ್ನು ಮಾಡಿದ್ದೇನೆ.

**ದಿನಕರ**:— ಮತ್ತೆ ಪೋಲಾಂಡ ದೇಶವನ್ನು 'ಪಲಾಂಡು' ವಾಗಿ ಮಾಡಿಬಿಟ್ಟರೆ ಹೇಗೆ ?

**ಮಾಸ್ತರ**:— ಅದಕ್ಕೆ ಕಾರಣವಿದೆ, ಡಾಕ್ಟರ್. ಪಡುವಣದಿಂದ ಬಂದ ಸಾಹೇಬರೆಲ್ಲ ಹಲ್ಲುತಿಕ್ಕುವದಿಲ್ಲ. ಅವರ ಬಾಯಲ್ಲಿ ಕೆಟ್ಟ ನಾತವಿಡಗಿರುತ್ತದೆ. ಅದಕ್ಕಾಗಿ ಪಶ್ಚಿಮ ದೇಶಗಳಲ್ಲೊಂದಾದ ಪೋಲಾಂಡನ್ನು "ಪಲಾಂಡು" ಎಂದು ಕರೆದುಬಿಟ್ಟೆ. ಹಾಗೆ ಮಾಡುವದರಲ್ಲಿ ಔಚಿತ್ಯ ಎದೆ ನೋಡಿರಿ !

**ದಿನಕರ**:— ಹೌದು ಬಿಡಿರಿ! ಉಳ್ಳೇಗಡ್ಡೆಗೆ ವಿಲಾಯತಿ ಬದನೇಕಾಯಿಯ ಸಾಕ್ಷಿಯನ್ನು ಕೊಟ್ಟಂತೆ!

**ಮಾಸ್ತರ**:— ಮುಂದೆ ಇನ್ನೂ ಮನೋಹರವಾಗಿದೆ. ನೋಡಿರಿ! ಹಿಟ್ಲರಾಸುರನು ಅವಳನ್ನು ಅಪಹರಿಸ ಬರಲು ಪಲಾಂಡುಕನ್ಯೆಯು ಎಲ್ಲರಲ್ಲಿಯೂ ಮೊರೆಯಿಡುತ್ತಾಳೆ :

**ಮೋಸಚಿಕ್ಕಿ ಭಾಸ್ಕರನೆ ! ನಾ**
**ಗಾಸಿಗೊಂಡೆನು ಖಾಸ್ ಪ್ರಜಾಪತಿ !**
**ದಾಸಿ ನನ್ನಯ ಕಾಯಬೇಕೈ ಇಂದ್ರಸೇನಾರ್ಯ !**

**ಮೂಸಿ ನೋಡೋ ಚೇಂಬರಾಪತಿ**
**ಹೂಂಸು ಬಿಟ್ಟವನಂತೆ ಹಿಟ್ಲರ**
**ವಾಸನೆಯ ಹಬ್ಬಿಸಿಹ ನಮ್ಮ ಪಲಾಂಡು ದೇಶದಲಿ ||**

ಶಾಲಿವಾಹನ ಸಮನು ಬಂದ ನೃ-
ಪಾಲ ಸ್ಟ್ಯಾಲೀನನು ದುರಾತ್ಮನ
ಕಾಲು ಮುರಿಯುವೆನೆಂದು ಕೋಲಾಹಲವ ಮಾಡಿದನು
ಬಾಲೆ ! ನಿಮ್ಮ ಪಲಾಂಡು ದೇಶದ
ಮೂಲದಲ್ಲಿಹ ಶಂಖಚಕ್ರವ
ಸಾಲ ಕೊಡು ಬಡ್ಡಿಯಲಿ ನಿನ್ನನು ರಕ್ಷಿಸುವೆನೆಂದ ||

**ದಿನಕರ:**— ಇದೇನು ಮಾಸ್ತರೆ! ಯಾವ ಮಹಾ ವೀರರಲ್ಲಿ ಪಲಾಂಡು ಕನ್ಯೆಯು ಮೊರೆಯಿಡುತ್ತಿದ್ದಾಳೆ?

**ಮಾಸ್ತರ:**— ೧೯೩೯ ರಲ್ಲಿ ಆದ ಮಹಾಯುದ್ಧವನ್ನು ಲಕ್ಷ್ಯಕ್ಕೆ ತರ್ರಿ, ಡಾಕ್ಟರಸಾಹೇಬಾ ! ಮಾ:ಸಚಿಸ್ಕಿ ಎಂಬವನೇ ಆಗ ಪೋಲಾಂಡಿನ ಪ್ರೆಸಿಡೆಂಟನಾಗಿದ್ದ. ಕಾಸ್ಪರ್ಸ್ ಬಿಟ್ಸಿಯೇ ಯುದ್ಧಮಂತ್ರಿಯಾಗಿದ್ದ. ಇಂಗ್ಲಂಡಿನಲ್ಲಿ ಯುದ್ಧ ಸಿದ್ಧತೆಯ ಮಂತ್ರಿಯಾದ ಎಂಡರ್ಸನ್ನನೇ ನಮ್ಮ ಇಂದ್ರಸೇನ. ಛತ್ರಧಾರಿಯಾಗಿದ್ದ ಚೆಂಬರಲೀನನೇ ಇಲ್ಲಿಯ ಚೇಂಬರಾಪತಿ. ಹೆಸರುಗಳನ್ನು ಲಾಕ್ಷಣಿಕವಾಗಿ ಬದಲಾಯಿಸಿಕೊಂಡಿದೆ. ಹೊಸದೊಂದು ಯುಗವನ್ನು ಯುರೋಪಿನಲ್ಲಿ ಪ್ರಾರಂಭಿಸಿ ಶಕಪುರುಷನಾಗಿ "ಪಲಾಂಡು ಕನ್ನೆ"ಯನ್ನು 'ರಕ್ಷಿಸಲು' ಒಪ್ಪಿದ ಸ್ಟ್ಯಾಲೀನನನ್ನು ಶಾಲಿವಾಹನ ಸಮನೆಂದು ಕರೆದಿದೆ.

**ದಿನಕರ:** – 'ಹೂಂಸಿ' ನಂತಹ ಹೊಲಸು ಶಬ್ದವನ್ನು ನೀವು ಉಪಯೋಗಿಸಬೇಕೆ, ಮಾಸ್ತರೆ!

**ಮಾಸ್ತರು:**— ಅಲ್ಲ, ಡಾಕ್ಟರ್‌ಸಾಹೇಬಾ ! ಇಲ್ಲಿ 'ಹೂಂಸೆ'ಂದರೆ ಹಿಟ್ಲರನು ಬಿಟ್ಟ ವಿಷವಾಯು, ವಿಷದ ಗ್ಯಾಸು !

**ದಿನಕರ:**— ಅಹಾ ! ಇದಕ್ಕೆನ್ನಬೇಕು ಪ್ರತಿಭೆಯೆಂದು ! ಮುಂದೆ ಸಾಗಲಿ ನಿಮ್ಮ ಪುರಾಣ !

**ಮಾಸ್ತರು:**—

ಹಿಗ್ಗುತದಕೆ ಪಲಾಂಡು ಕನ್ಯೆಯು
ಅಗ್ಗಳಿಕೆವೆತ್ತಾ ನೃಪಾಲನ
ಕುಗ್ಗು ಮುಗ್ಗಿರದೆಣ್ಣೆಗಪ್ಪಿನ ಕಲ್ಲಿಮೀಸೆಯನು ||
ಬಗ್ಗಿಸಿದಳು ಪಲಾಂಡು ಗಬ್ಬದಿ
ತಗ್ಗಿಸಿದಳಾ ಹಿಟ್ಲರಾಸುರ
ಕಗ್ಗನಂತೆಯೆ ನುಗ್ಗಿ ಧರಿಸಿದ ದಂಶಶ್ಮಶ್ರುವನು ||
ಕಲ್ಲಿಮೀಸೆಯೆ ಇಹದಿ ಶ್ರೇಷ್ಠವು
ಕಲ್ಲಿಮೀಸೆಯೆ ಪರದಿ ಶ್ರೇಷ್ಠವು
ಕಲ್ಲಿಮೀಸೆಯು ಮುರಿಯದಿರುವರು ಹಲ್ಲಿ ಮಾನವರು ||
ಕಲ್ಲಿಮೀಸೆಗಳಿಲ್ಲದವರನು
ಗಲ್ಲಿಗೇರಿಸಬೇಕು ದೇಶದಿ
ಕಲ್ಲಿಮೀಸೆಯೆ ತಿಳಿದು ನೋಡಲದಾತ್ಮ ಪರಮಾತ್ಮ ||

**ದಿನಕರ:**—ಹಾಂ ! ಇನ್ನು ಓದುವದು ಸಾಕು. ನನ್ನ ಪ್ರಾಮಾಣಿಕ ಅಭಿಪ್ರಾಯವನ್ನು ಹೇಳಲೇನು, ಮಾಸ್ತರಸಾಹೇಬ್ ?

**ಮಾಸ್ತರು:**— ಅಯ್ಯೊ, ಶಿವನೆ! ತಾವು ಜಗತ್ತಿನಲ್ಲಿ ತಿರುಗಾಡಿ ಬಂದವರು. ತಾವು ಸಾಹೇಬರು. ನನಗೇಕೆ ಸಾಹೇಬರೆಂದು—

**ಡಾಕ್ಟರು:**—ಅದೇನೆ ಇರಲಿ. ನನ್ನ ಅಭಿಪ್ರಾಯವನ್ನು ಹೇಳಲೇ ?

**ಮಾಸ್ತರು:**—ಅವಶ್ಯವಾಗಿ ! ಅದಕ್ಕಾಗಿಯೇ ನಾನು ತಮ್ಮ ಕಡೆಗೆ ಬಂದದ್ದು—

**ಡಾಕ್ಟರ:**—(ಎದ್ದು ತಿರುಗಾಡುತ್ತ) ಇಲ್ಲಿ ನೋಡಿರಿ, ಮಾಸ್ತರ್ ! ನಿಮಗೆ ಸತ್ಯವಾಗಿ ಹೇಳುತ್ತೇನೆ. ಕಾವ್ಯವಸ್ತುವಿಗೆಂದು ವರ್ತಮಾನಪತ್ರಗಳ ಸಂದಿಗೊಂದಿಗಳನ್ನು ಹುಡುಕಿ ನಿಮಗೆ ಸಂಧಿವಾತವು ಹಿಡಿದಿದೆ. ಹೊಸ ವಾತಾವರಣದಲ್ಲಿ ಉಸಿರಾಡಿಸಲು ದೊರೆಯದೆ ಹೋಗಿ ನಿಮ್ಮ ಬುದ್ಧಿಗೆ ಕ್ಷಯರೋಗ ಹಿಡಿದಿದೆ.

**ಮಾಸ್ತರು:**—(ಕುರ್ಚಿಯ ಹಿಂದಕ್ಕೆ ಆತು ಕೂತು) ನನಗೆ! ಅಯ್ಯೋ ನನಗೆ! ಕ್ಷಯವೇ !

**ಡಾಕ್ಟರು:**—ಹೌದು, ಕ್ಷಯ ! ನಿಮ್ಮ ಬುದ್ಧಿಗಂಟಿದ ಈ ರಾಜಯಕ್ಷ್ಮವನ್ನು ಕಳೆಯಬೇಕಾದರೆ ನೀವು ಆಂಗ್ಲಭಾಷೆಯನ್ನು ಕಲಿಯಬೇಕು. "ಸ್ಯಾನಿಟೋರಿಯಮ್" ಎಂದು 'ಕ್ಷಯರೋಗಿ ನಿವಾಸದ ಬಗ್ಗೆ ನೀವು ಕೇಳಿಲ್ಲವೇ? ಅಂಥದೊಂದು ನಿವಾಸವಾದ ಆರ್ಟ್ಸ್ ಕಾಲೇಜನ್ನು ನೀವು ಸೇರಬೇಕು. ಆಗ ನಿಮ್ಮ ಬುದ್ಧಿಯು ನಿರೋಗಿಯಾಗುವದು.

**ಮಾಸ್ತರು:**— ಅದಿರಲಿ ಡಾಕ್ಟರ್‌ಸಾಹೇಬ್ ! ನನಗೆ ಕ್ಷಯವೆಂದಿರಲ್ಲ ! ಇದರಿಂದ ತಲೆಗೆ ಸಿಡಿಲು ಒಡೆದ ಹಾಗಾಯಿತು. ಮೊದಲು ನನಗೆ ಔಷಧ ಕೊಡಿರಿ.

**ಡಾಕ್ಟರು:**— ಭೀಮು ! ಬಾ, ಇಲ್ಲಿ! ಇವರಿಗೆ ಆ ಬಾಟ್ಲಿಯೊಳಗಿನ ಔಷಧವನ್ನು ಮೂಸಿ ತೋರಿಸು.

(ಭೀಮು ಬಂದು ನೀಲಗಿರಿ ಎಣ್ಣೆಯ ಬಾಟ್ಲಿಯನ್ನು ಮಾಸ್ತರ ಕೈಯಲ್ಲಿ ಕೊಡುತ್ತಾನೆ.)

**ಮಾಸ್ತರು:**—(ಮೂಸಿ ನೋಡಿ) ಅಯ್ಯೋ! ಇದೇ! ನೀಲಗಿರಿ ಎಣ್ಣೆ!

**ಡಾಕ್ಟರು:**—ಹೌದು. ಗಾವಠಿ ಜನರು ಹಾಗೆ ಹೇಳುತ್ತಾರೆ. ಇದರ ನಿಜವಾದ ಹೆಸರು ಯುಕ್ಲಿಪ್ಟಸ್! ಬೇನೆಯ ನೆನಪಾದಾಗೊಮ್ಮೆ ಇದನ್ನು ಮೂಸಿ ನೋಡಬೇಕು. ನಡೆಯಿರಿನ್ನು!

**ಮಾಸ್ತರು:**—ಅಯ್ಯೋ, ಶಿವನೆ! ಬರೆದಿದ್ದನ್ನು ತೋರಿಸಲಿಕ್ಕೆ ಬಂದರೆ ಕರೆಯದಿದ್ದ ರೋಗ ಬಂದು ಮೈಯಲ್ಲಿ ಮನೆಮಾಡಿತು. ಬರುತ್ತೇನೆ, ಡಾಕ್ಟರೆ!

**ಭೀಮು:**—ಹಾಂ! ಇಲ್ಲಿ ತರ್‍ರಿ! ಆ ಯುಕ್ಲಿಪ್ಟಸ್ ಬಾಟ್ಲಿಯನ್ನು! ಕಾವ್ಯಪರೀಕ್ಷೆಯು ಧರ್ಮಾರ್ಥವಾದರೆ ಔಷಧವೂ ಧರ್ಮಾರ್ಥವಲ್ಲ!

(ಮಾಸ್ತರು ಹೋಗುವಾಗ ಆ ಬಾಟ್ಲಿಯನ್ನು ಕಸಿದುಕೊಂಡು ಕಪಾಟನಲ್ಲಿಟ್ಟು ತನ್ನ ಕೋಣೆಗೆ ಹೋಗುತ್ತಾನೆ. ಇದೇ ಸುಮಾರಕ್ಕೆ ಕೈಯಲ್ಲಿ ತಂಬೂರಿಯೊಂದನ್ನು ಹಿಡಿದ ಪಾಯಪ್ಪನೂ ತಾನೇ ಪ್ರಸಿದ್ಧಿಸಿದ ತನ್ನ ಕವನಸಂಗ್ರಹವೊಂದನ್ನು ಓದುತ್ತ ಏಕಾಂಬರರಾಯನೂ ಬರುತ್ತಾರೆ. ಪಾಯಪ್ಪನು ಹಳ್ಳಿಯ ಕೆಂಚನ್ನೇ ಹೊರತು ಬೇರೆಯಲ್ಲ. ಒಂದು ಅಂಗಿ, ಒಂದು ಗಿಡ್ಡ ದೋತರ, ಒಂದು ಹರಕು ರುಮಾಲು,—ಇವೇ ಅವನ ಅರಿವೆಗಳು. ಕೊರಳಲ್ಲಿ ರುದ್ರಾಕ್ಷಿಯನ್ನು ಧರಿಸಿದ್ದಾನೆ. ಮೋರೆಯ ಮೇಲೆ ಮೂಗಿನ ಮೂಲೆಗೆ ಹಣೆಯ ಕೆಳಗೆ ಕುಂಕುಮ ಹಚ್ಚಿಕೊಂಡು ತಾನು ಶಕ್ತಿಯ ಉಪಾಸಕನೆಂದು ಪಾಯಪ್ಪನು ಜಗಜ್ಜಾಹೀರು ಮಾಡಿದ್ದಾನೆ. ಏಕಾಂಬರರಾಯರು ಒಂದು ನೆಹರು ಶರ್ಟು ಹಾಕಿ ಗಾಂಧಿ ಟೊಪ್ಪಿಗೆಯನ್ನು ಧರಿಸಿರುತ್ತಾರೆ. ಅವರ ಅರಿವೆಗಳೆಲ್ಲ ಖಾದಿ, ಕೈಯಲ್ಲಿ ಖಾದಿ ಕವರಿನಲ್ಲಿಯೇ ಬೈಂಡಾದ ತಮ್ಮ ಕವನಸಂಗ್ರಹವೊಂದನ್ನು ಏಕಾಂಬರರಾಯರು ಹಿಡಿದಿರುತ್ತಾರೆ)

**ಭೀಮು:**—(ತನ್ನ ಕೋಣೆಯೊಳಗಿಂದ) ಮತ್ತಿಬ್ಬರು ಒಳಗೆ ನುಗ್ಗಿದರು.

**ಡಾಕ್ಟರು:**—ಬರಲಿ! ಸಿದ್ಧನಿದ್ದೇನೆ. ಎಲ! ಇವರಾರು? ಕೈಯಲ್ಲಿ ತಂಬೂರಿ ಹಿಡಿದ ಹಳ್ಳಿ ಕೆಂಚನೊಡನೆ ವಾದ ಹೂಡುತ್ತ ಬರುವ ನೆಹರು ಶರ್ಟಿನವರು?

**ಪಾಯಪ್ಪ:**—ನಾವು, ರಾಯರ! ಗಾಬರಿ ಆಗಬ್ಯಾಡರಿ! ನಾವೇನು ನಿಮ್ಮ ಟೇಮೂ ತೊಗೊಂಬೋ ಹಾಂಗಿಲ್ಲ. ಬೀಸುಕಲ್ಲಿನ ಪದಗೋಳ ಹೇಳೋ ಧಾಟಿ ಕೇಳಲಿಕ್ಕೆ ಈ ರಾಯರು ನಮ್ಮೂರಿಗೆ ಬಂದಿದ್ದರು, ರಾಯರ! ಕಾಲೇಜಿನ ಮಂದಿ ಬರದ ಪದಾ ಅಂತ ತಮ್ಮ ನಾಕು ಕವಿತಾ ಅಂದು ತೋರಿಸಿದರು. ನೀವು ಟಿಸ್ ಪಿಸ್ ಅಂತ ಏನು ಹೇಳಿದರೇನು, ರಾಯರ! ನಮ್ಮ ತುರತುರಿ ಪದಧಾಂಗ ನಿಮ್ಮ ಕವಿತಾ ಆಗೋಣಿಲ್ಲಾ ಅಂತ ನಾ ಹೇಳೋದು. ನಿಮ್ಮಂಗ ಹಳ್ಳಿಯವರಂಗ ಎಲ್ಲಾರು ಬರದರ ಹಳ್ಳಾ ಹಿಡದು ಹೋಗಬೇಕಾಗೀತು ಅಂತ ಈ ರಾಯರು ಅಂತಾರ. ಇದರಾಗ ಕರೇ ಯಾವದು ಸುಳ್ಳು ಯಾವದು ಒಮ್ಮೆ ನಿಕಾಲಿ ಮಾಡಿಬಿಡೂನು ಅಂತ, ನಾಕ ಮಂದಿ ಬಾಯಾಗ ನಿಮ್ಮ ಹೆಸರು ಕುಂತಿತ್ತು, ರಾಯರ! ಅದಕ ನಿಮ್ಮ ಕಡೀಗಿ ಬಂದೀವಿ ನಾವು!

**ಡಾಕ್ಟರು:**—ಇದು ನಿನ್ನ foreword ಆತು. ಇನ್ನ ನೀ ಬರೆದಿದ್ದ ಒಂದ ಪದ ಹೇಳು, ಪಾಯಪ್ಪಾ, ನೋಡೋಣು.

**ಏಕಾಂಬರರಾಯ:**—ಇವ ಇಲ್ಲಿಯ ತನಕ ಹೇಳಿದ್ದು foreword ಉ. ಇನ್ನ ಮುಂದ ಬರೋದು ಬ್ಲಾಕು. ಅಂತೂ ಇವ ಬರೆದದ್ದೆಲ್ಲ foreword block ಉ! ಈ ಹಳ್ಳೀ ಜನರ Tunes ಇವೆಯಲ್ಲ, ಆ Tunes ತೆಗೆದುಕೊಂಡು ನಾವು ಹೊಸ ಜನರು ಕವಿತೆ ಬರೆಯಬೇಕು, ಡಾಕ್ಟರ ಸಾಹೇಬ್! ಅದೇ ಒಳ್ಳೆಯ ಕಾವ್ಯ,-ಎಂದು ನನ್ನ ಅಭಿಪ್ರಾಯ. ಹಳ್ಳಿಯವರು ಬರೆದ ಹೋಳಿ-ಹುಣ್ಣಿಮೆ ಪದಗಳನ್ನು ತೆಗೆದುಕೊಂಡು ನಾವೇನು ಮಾಡಬೇಕಾಗಿದೆ? ಬೀಸುಕಲ್ಲು ಹಾಡು, ಲಾವಣಿ, ಸಾಂಗತ್ಯ, ಅಂಬಿಗರ ಹಾಡು, ಹೊಲತಿಯರ ಹಾಡು,—ಇವೆಲ್ಲದರ Tunes ನಮಗೆ ಬೇಕಾಗಿವೆ. Tunes ತೆಗೆದುಕೊಂಡು ಪಾಯಪ್ಪನಂಥವರಿಗೆ ಆ ಪದಗಳನ್ನು ಬಿಟ್ಟುಬಿಡೋಣ. ಇತ್ತೀಚೆಗೆ ಜನ ಬೋಳುಪದ, ಪ್ರಾಸವಿಲ್ಲದ ಪದ, ರಾಗವಿಲ್ಲದ ಪದಗಳನ್ನು ಬರೆಯುತ್ತಾರೆ. ಇದರಿಂದ ಕನ್ನಡಕ್ಕೆ ಅಪಾರವಾದ ಹಾನಿಯಾಗುತ್ತಲಿದೆ. 'ಅರಿತವರಿಗತಿ ಸುಲಭ ಹರಿಯ ಪೂಜೆ..' ಇದರಲ್ಲಿಯ Tune ಎಷ್ಟು ಸುಂದರವಾಗಿದೆ! 'ಅರಸುಗಳಿಗಿದು ವೀ....ರ'—ಇಲ್ಲಿ 'ವೀ'ದ ಸ್ವರವು ಧನುಷ್ಯದ ಟಂಕಾರದಂತೆ ಹೇಗೆ ಮಣಿದು ಬರುತ್ತಿದೆ ನೋಡಿರಿ! 'ಸ್ವರ್ಗ ಮರ್ತ್ಯ ಪಾ.. ತಾ..ಳ,' ಇಲ್ಲಿ ಪಾತಾಳಕ್ಕೇ ನಮ್ಮ ಧ್ವನಿ ಹೇಗೆ ಹೋಗುತ್ತದೆ ನೋಡಿರಿ? ಹಳ್ಳಿಗರ ಸ್ಥೂಲ ಶೃಂಗಾರ—ವೇದಾಂತಗಳು ಅವರಿಗೇ ಇರಲಿ. ನಮಗೆ ಬೇಕಾಗಿದ್ದು ಅವರ Tunes ಮಾತ್ರ. *Tunes!* ಕಾವ್ಯದ ಜೀವಾಳ ತೂಣಗೊಂಡ ತಾನದಲ್ಲಿದೆ. Oh! for a life of Tunes rather than Tons of meaning! ಇಲ್ಲಿಯೇ, ನಿಮ್ಮ ಸೋಫಾದ ಮೇಲೆ ಸ್ವಲ್ಪ ಒರಗುತ್ತೇನೆ, ಡಾಕ್ಟರೆ! ನನಗೆ ಸಂಗೀತಸಮಾಧಿ ಬಂದಿತು.

**ಡಾಕ್ಟರು**:— ಇಲ್ಲಿಯೇ ಸುಖವಾಗಿ ಒರಗಿರಿ, ಸಂಗೀತಸಾಧುಗಳೇ! ಪಾಯಪ್ಪ! ಈಗ ನಿನ್ನದೊಂದು ಪದ ಹೇಳು, ನೋಡೋಣ!

**ಪಾಯಪ್ಪ**:— ಮಾತುಮಾತಿನ್ಯಾಗ ಮುಲರೋಗ ಹಾಯತದ ನೋಡ್ರಿ, ರಾಯರಿಗೆ! ನಮ್ಮೂರಾಗೂ ಹಂಗ ಮಾಡಿದರು. ಇಕಾ! ಹೇಳತೇನಿ ಪದಾ, ರಾಯರ! (ಏಕತಾರಿ ಬಾರಿಸುತ್ತ)

ಎಲ್ಲರಂಥವನಲ್ಲ ನನ ಕಲ್ಲಾ |
ಸಾಯಕಲ್ಲೇರಬಲ್ಲಾ || ಪ ||

ಎಲ್ಲರಂಥವನಲ್ಲ ಕಲ್ಲಾ |
ಎಂಥ ಸಾಯಕಲ್ಲು ಏರಬಲ್ಲಾ |
ಏರಿ ಇಳಿದೂ ದಿನ್ನೆ ಹತ್ತಿ
ಕೈಯ್ಯಬಿಟ್ಟ್ರೂ ಕುಣಿಯಬಲ್ಲಾ || ೧ ||

ಕೈಗಳೆರಡೂ ಚಕ್ರ ಹಿಡಿದೂ |
ಕಾಲ್ಗಳೆರಡೂ ತೂಕವಿಟ್ರೂ |
ಏಳು ಕೋಟೇ ಮೈಲು ದಾಟ |
ಲಾಗ ಹಾಕುತ ಸಾಗಬಲ್ಲಾ || ೨ ||

ಗಾಳಿ ಬರಲೀ, ಗೂಳಿ ಬರಲೀ |
ಮಂದಿ ಬರಲೀ ಹಂದಿ ಬರಲೀ |
ಥಣಣ ಥಣ ಥಣ ಗಂಟೆ ಬಾರಿಸಿ |
ಟಣಣ ಟಣ್ಣನೆ ಜಿಗಿಯಬಲ್ಲಾ || ೩ ||

ಲ್ಯಾಂಪು ಇರಲೀ ಇಲ್ಲದಿರಲೀ |
ಕತ್ತಲಲ್ಲಿಯು ಮುಂದೆ ನುಗ್ಗೀ |
ಮುಗಿಲು ಟೊಂಗೆಯ ಚಿಕ್ಕೆ ಹರಿದೂ |
ತನ್ನ ಲ್ಯಾಂಪನು ಮಾಡಬಲ್ಲಾ || ೪ ||

**ಏಕಾಂಬರರಾಯ**:— (ಚಟಕ್ಕನೆ ಸೋಫಾದ ಮೇಲಿಂದೆದ್ದು) ಇದು ಉತ್ತಮವಾದ Tune ನೋಡಿರಿ, ಡಾಕ್ಟರ! ಇದನ್ನೆಲ್ಲ ಬಿಟ್ಟು ಹೊಸಕಾಲದ ಕನ್ನಡವೆಂದು ಕೂಗಿ—

'ರಕ್ಷಣೆ ಕರನಾ!
ಟಕ ದೇವೀ ಸಂ-
ರಕ್ಷಣೆ ಕರನಾ!
ಟಕ ದೇವೀ!'

ಎಂದು 'ಕರ್ನಾಟಕ ದೇವಿ'ಯ ಪ್ರಾಣ ಟುಕುಟುಕು ಅನ್ನುವ ಹಾಗೆ ಕವಿತೆ ಹೇಳಿ ಟಕಮಕ ಜನರ ಮೋರೆ ನೋಡುತ್ತ ನಿಲ್ಲುವ ಕವಿಗಳಿಗೇನು ಹೇಳಬೇಕು?

ಗಳಗಳ ಅಳುದನಿ ಜೋಗುಳ ಹಾಡುತ
ಸಣ್ಣಲಿ ಸೊಂಡಿಲಿ ಬಕಬಕ ನುಂಗುತ
ಅಳಿಗಾಲದ ಗೂಗಿ,
ಕರೆಯಲು
ಮಾರಿಯಂತೆ ಕೂಗಿ:—,

ಇದರಂತಹ ರಾಗಗಳು ಬೇಕಾಗಿವೆ, ಇಂದು!

ತೆಂಗಿನೆಣ್ಣೆಯೇ ನಿನ್ನನಿಳುಹುವಾ
ಸೀಗೆಯು ಹುಣ್ಣೆಮೆಯೊಂದಿಗೆ ಬಹುದೋ!,

ಎಂದು ಭಾರತದ ಸ್ವಾತಂತ್ರ್ಯಕ್ಕೆ ಎಣ್ಣೆ-ಸೀಗೆಯ ಸಂಬಂಧ ಹಚ್ಚಿ ಇಂದಿನ ಕವಿಗಳು Tunes ಹಿಡಿದು ಹಾಡಬೇಕಾಗಿದೆ.

ಆಡದಿರು ಓ ಹೆಣ್ಣೆ!
ಗೋಲಿಗುಂಡಾಡದಿರು
ಮನೆಯವರು ಬೇಡೆನಲು
ಗುಂಡನಾಡುವದುಂಟೇ?
ಗುಂಡು ಬೋದಿಗೆ ದೀಕಿ
ಕೈಯೆಲ್ಲ ಕೊರೆದಾವು
ಆಡದಿರು ಓ ಹೆಣ್ಣೆ!
ಗೋಲಿಗುಂಡಾಡದಿರು.,

ಎಂದು ಬೋಳುಪದಗಳನ್ನು ಸೂರೆಮಾಡಿ ನಮ್ಮ ಕವಿಗಳು ಸ್ವರಸಂಗೀತವನ್ನೇ ಕಾವ್ಯದಿಂದ ತಳ್ಳಿದ್ದಾರೆ. ಆದರೂ ಕೆಲವು ಸ್ತುತ್ಯ ಪ್ರಯತ್ನಗಳಾಗಿವೆ.

ತುವಮ್ ತುವಮ್ ತುವಮ್ ತುವಮ್ ತುವಮ್ ತುವಮ್
ತುವಮ್ ತುವಮ್
ತುಂಬಿ ಬಂದಿತ್ತs!
ತಂಗೀ!
ತುಂಬಿ ಬಂದಿತ್ತು!
ಅತ್ತೀ ಮನಿಗೇ ಹೋsಗುವಾಕೀ
ತುವಮ್ ತುವಮ್ ತುವಮ್ ತುವಮ್ ತುವಮ್
ತಂಗೀ!
ತುವಮ್ ತುವಮ್ ತುವಮ್ ತುವಮ್ ತುವಮ್
ದೀಪಾವಳಿಗೇ ಮಾವನ ಮನಿಗೇ
ಹವಮ್ ಹವಮ್ ಹವಮ್ ಹವಮ್ ಹವಮ್
ತಂಗೀ
ಹವಮ್ ಹವಮ್ ಹವಮ್ ಹವಮ್ ಹವಮ್
ಸಾಲೆಯ ಜಗಲಾ ಛಡೀ ಸಪ್ಪಳಾ
ಛವಮ್ ಛವಮ್ ಛವಮ್ ಛವಮ್ ಛವಮ್
ತಂಗೀ

**ಛಮ್ ಛಮ್ ಛಮ್ ಛಮ್ ಛಮ್**
**ಇಷ್ಟಕ ಬಿಡದೇ ಮಾಸ್ತರ ಹೊಡದಾ**
**ರಮ್ ರಮ್ ರಮ್ ರಮ್ ರಮ್**
**ತಂಗೀ**
**ರಮ್ ರಮ್ ರಮ್ ರಮ್ ರಮ್**
**ಬೆಂಕಿ ಬಿದ್ದರೂ ಅಂಕಿ ಬಂದವೋ**
**ಘುಮ್ ಘುಮ್ ಘುಮ್ ಘುಮ್ ಘುಮ್**
**ತಂಗೀ**
**ಘುಮ್ ಘುಮ್ ಘುಮ್ ಘುಮ್ ಘುಮ್**
**ಗುಂಗೀ ಹುಳದಂಥ ನಾದಹುಟ್ಟಿತೋ**
**ಗುಮ್ ಗುಮ್ ಗುಮ್ ಗುಮ್ ಗುಮ್**
**ನನಗೊಂದ**
**ಗುಮ್ ಗುಮ್ ಗುಮ್ ಗುಮ್ ಗುಮ್**

ಇದರಂತೆ ಕನ್ನಡದಲ್ಲಿ ಬರಿ ಸಂಗೀತದ ಮೇಲೆ ಕಾವ್ಯವಾಗ ಬೇಕು, ಡಾಕ್ಟರಸಾಹೇಬ! ಅದನ್ನೆಲ್ಲ ಬಿಟ್ಟು ಈ ಕಲ್ಲನ ಪದಗಳನ್ನು ತೆಗೆದುಕೊಂಡು ನಮಗೇನು ಮಾಡ ಬೇಕಾಗಿದೆ? ಅದಕ್ಕಿಂತ ಪೆದ್ದನ ಪದಗಳು ನಮಗೆ ಹೆಚ್ಚು ಸೇರಬಹುದು.

**ಡಾಕ್ಟರ:**— ಅದೇಕೆ ಅದರಲ್ಲಿಯೂ ಅರ್ಥವಿದೆ. ಹೇಳೋ ಪಾಯಪ್ಪ ನಿನ್ನ ಪದದ ಅರ್ಥ ಹೇಳು!

**ಪಾಯಪ್ಪ:**— ಅರ್ತಕ್ಕೇನು ಬಡತಾಸರೀ, ರಾಯರ! ಹತ್ತು ಅರ್ತ ಹೊಂಟಾವು ಈ ಪದದಾಗ! ನಾಯಿಕಲ್ಲಂದರ ಸಂಸಾರ!—ನಾಯೋ ಕಲ್ಲು! ನಮ್ಮ ಕಲ್ಲಪ್ಪ ಅಂದರ ನರಹುಸನ್ನಾ, ಗಂಡನು! ತೆಗ್ಗಿರಲಿ, ದಿನ್ನಿ ಇರಲಿ,—ಗಂಡನಾದವ ಯಾರಪ್ಪಗೂ ತಾ ಹಿಡಿದ ಹಾದಿ ಬಿಡೋದಿಲ್ಲ! ಅದಿರಲಿ ರಾಯರ! ಇದಕ್ಕಿಂತ ಹೆಚ್ಚಿನ ತುರತುರಿ ಪದ ಹೇಳತೇನಿ ಕೇಳ್ರಿ. ಅದರ ಶಂಭಿ ಒಲ್ಲವನ ಬಲ್ಲಾ! (ಏಕತಾರಿ ಮಿಡಿಯುತ್ತ.)

**ಹೊಂಟಯಲ್ಲೋ ಪತ್ರಿ ಭೀಮಣ್ಣಾ**
**ನೀ ತೊಳಲಿ ಬಳಲೀ ॥ ಪ ॥**
**ಹಿಂದ ಅಳತಾಳ ಹೇಣ್ತಿ ಸಾವಿ ।**
**ಮುಂದ ಅಳತಾನ ಮಗ ಫಕೀರಾ ।**
**ಹಿಂದ ಅಳುವಕಿ ಹೇಣ್ತಿ ಅಲ್ಲಾ ।**
**ಮುಂದ ಅಳುವವ ಮಗನು ಅಲ್ಲಾ ॥ ೧ ॥**

**ಡಾಕ್ಟರು:**— ಏಕಾಂಬರರಾವ, ಹಳ್ಳಿಯ ಪದಗಳಲ್ಲಿ ಅರ್ಥವಿಲ್ಲೆಂದು ಹೇಳುವ ನೀವು ಇಂದಿನ ಜನಪದ ಸಾಹಿತ್ಯಸಂಗ್ರಹವನ್ನು ನೋಡಿಯೇ ಇಲ್ಲವೆಂದು ಕಾಣುತ್ತದೆ. Percy's Reliques ಎಂಬ ಗ್ರಂಥವನ್ನು ಓದಿ ನೋಡಿರಿ. Tunes, Tunes ಎಂದು ಕುಳಿತರೆ ಮನುಷ್ಯ ಬರಿ Tuning fork ಆಗಿ ಬಿಡಬಹುದು. ನಾದದ ನಾದ ಹತ್ತಿದವನಿಗೆ ಉನ್ಮಾದವಾಯಿತೆಂದೇ ತಿಳಿಯಬೇಕು. ಅರ್ಥವ್ಯಕ್ತಿ, ವ್ಯಂಗ್ಯ, ಶಬ್ದವಿಲಾಸ ಇವೆಲ್ಲ ಎಲ್ಲಿ ಅಡಗ ಬೇಕು? ಮತ್ತೆ ಕಾವ್ಯವಾದರೂ ಯಾತಕ್ಕೆ ಬೇಕು ನಿಮಗೆ? ಗಮಕಿಗಳ ಗರಡಿಗಳಷ್ಟು ಸಾಕಾಗಿಬಿಡಬಹುದಲ್ಲ? ಭೀಮೂ! The meaning of Poetry— ಎಂಬ ಪುಸ್ತಕ, ಕಿಮ್ಮತ್ತು ತೆಗೆದುಕೊಂಡು—ಮತ್ತೆ ಬಾಳೆಹಣ್ಣಿನ ಅರ್ಕ ನಿಂದ ತಯಾರು ಮಾಡಿದ Brain Tonic ನ ಒಂದು ಬಾಟ್ಲಿ,—ಇವನ್ನು ಕೊಟ್ಟು ಈ ರಾಯರಿಗೆ ಅಪ್ಪಣೆ ಕೊಡು

(ಭೀಮು ಏಕಾಂಬರರಾಯರನ್ನು ಕರೆದುಕೊಂಡು ಹೋಗುತ್ತಾನೆ)

ನೀನು, ಪಾಯಪ್ಪ! ದಿನಾಲು ಹತ್ತಿಪ್ಪತ್ತು ಪದ ಬರೆದು ಅತಿಸಾರವಾಗಿದೆ ನಿನಗೆ! ಮನುಷ್ಯನೆಂದ ಮೇಲೆ ಮೊದಲು ಸಂಯಮ ಬೇಕು. ನಿನಗೆ ಗೊತ್ತಿದ್ದ ಸುಖ ದುಃಖಗಳ ಹಾಡ ಹಾಡು. ಲಕ್ಷ ಕೋಟಿ ಭುವನಗಳ ಇಪ್ಪತ್ತೇಳು ಲೋಕಗಳಲ್ಲಿ ಎಪ್ಪತ್ತೇಳು ಪರ್ವತ, ಎಪ್ಪತ್ತೇಳು ಪರ್ವತಗಳಲ್ಲಿ ೧೪೪ ಗಿಳಿಗಳು,—ಎಂದು ಬೀಜಗಣಿತದ ಅಂಕಿಯಿಂದ ಅಂಕಿಗೆ ಹಾರುವ ಹವ್ಯಾಸವನ್ನು ಬಿಟ್ಟು,— ಒಂದು ಗಿಳಿ ಹೋಗಿ ಇಪ್ಪತ್ತೈದು ಗಿಳಿಗಳಾದವು.—ಎಂದು ಒಗಟ ಹಾಕುವದನ್ನು ಬಿಟ್ಟು ಮನುಷ್ಯನಂತೆ ಮಾತಾಡು. ಭೀಮೂ, ಈ ಪಾಯಪ್ಪನಿಗೆ ಅಪದ್ಧ-ಕವಿತಾ-ಬದ್ಧತಾ-ಚೂರ್ಣವನ್ನು ಕೊಟ್ಟು ಕಳಿಸು. ಹೂಂ, ನಡೆ! ಇನ್ನು ಮಾತಾಡಬೇಡ!

(ಇವರು ಹೋಗುವಷ್ಟರಲ್ಲಿ ಅಭಿನವ ಚಾಸರರು ಪ್ರವೇಶಿಸುತ್ತಾರೆ. ಅಭಿನವ ಚಾಸರರು ಉದ್ದ ಕೂದಲನ್ನು ಬಿಟ್ಟು ಶೇಕ್ಸಪಿಯರ್ ಕಾಲರ್ ಶರ್ಟಿನಂದರ ಮೇಲೆ ಬ್ಲೇಝರ ಕೋಟು ಹಾಕಿದ್ದಾರೆ. ಬಿಳಿಯರಿವೆಯ "ಪಾಟ್ಲೂನು" ಹಾಕಿ ಕರಿ ಬೂಟು ಮೆಟ್ಟಿದರೂ ತಲೆಯ ಮೇಲೆ ಒಂದು Cap ಇಲ್ಲವೆ ಸಾದಾ ಟೊಪ್ಪಿಗೆಯನ್ನು ಇಟ್ಟಿದ್ದಾರೆ. 'ಕನ್ನಡ ಕಾವ್ಯದ ಮಾತಾಪಿತ' ಎಂದು ದೊಡ್ಡಕ್ಷರಗಳಲ್ಲಿ ಅವರ ಬೆನ್ನ ಹಿಂದೆ ಕೋಟಿನ ಮೇಲೆ ಬರೆದಿದೆ. ಹೊಸ ನಮೂನೆ ಚಾಳೀಸು ಧರಿಸಿ ಕೂದಲವನ್ನು ಉತ್ತಮವಾಗಿ ಬಾಚಿಕೊಂಡಿದ್ದು ದುಮುದುಮು ಉರಿಯುತ್ತ ಕೈಯಲ್ಲಿ ಒಂದು ಬೆತ್ತವನ್ನು ಹಿಡಿದು ಅಭಿನವ ಚಾಸರರು ಪ್ರವೇಶಿಸುತ್ತಾರೆ.)

**ಅಭಿನವ ಚಾ:ಸರ್ :—**( ತಮ್ಮನ್ನೇ ನೋಡುವ ಡಾಕ್ಟರರನ್ನು ಉದ್ದೇಶಿಸಿ ) ಹಾಗೇಕೆ ನೋಡುತ್ತೀರಿ ಡಾಕ್ಟರ್! ನಾನಿದ್ದೇನೆ ನಾನು,— ನೂತನ ಕಾವ್ಯದ ಪಿತಾಮಹ, ಶೇಕ್ಸಪಿಯರನ ಚಿಗಪ್ಪ! ಮಿಲ್ಟನ್ನನ ಮುತ್ತಜ್ಜ! ಕನ್ನಡ ಕಾವ್ಯವು ಸುರುವಾಗಿದ್ದು ಯಾರಿಂದ? ಮೋಲೆಯೇ ಕಾಣುತ್ತದೆ. ( ಬೆನ್ನು ತೋರಿಸುತ್ತ ) ನನ್ನಿಂದ! ನಾನು ಯಾವಾಗಲೂ ಬರೆಯುವದು 'ಫ್ರಂಟಸೀಟ' ಕವಿತೆಗಳನ್ನು! ಪ್ರತಿಯೊಂದು ಮಾಸಿಕದಲ್ಲಿ ಮೊದಲನೆ ಪಾನಿನ ಮೇಲೆ ಇರುವ ಕವಿತೆಗಳೆಲ್ಲ ನನ್ನವೆಂದು ತಿಳಿದೇಬಿಡಬೇಕು ನೀವು! ಎಲ್ಲಕ್ಕೂ ಮೊದಲು ಕನ್ನಡದಲ್ಲಿ ಶಿಶುಗೀತಗಳನ್ನು ಬರೆದವರಾರು ಡಾಕ್ಟರಾ! ಪ್ರಶ್ನೆಯನ್ನೇ ಕೇಳಬೇಕಾಗಿಲ್ಲ. ಬರೆದವ ನಾನು.

> **ದೇವರ ಅಳ್ಳಿಟ್ಟನ ಗಂಟು :**
> **ಚಂದ್ರನೆಂಬ ಹೆಸರದಕುಂಟು**

ಎಂದು ಹಿಟ್ಟು ಚಲ್ಲಿದ ಹಾಗಿರುವ ಹುಣ್ಣಿಮೆಯನ್ನು ನಾನಲ್ಲದೆ ಯಾರು ಬಣ್ಣಿಸಿದರು? ಕನ್ನಡದಲ್ಲಿ ಇಂಗ್ಲೀಷಿನ ಮಾದರಿಯ ಮೇಲೆ ಭಾವಗೀತೆಗಳು ಹೇಗೆ ಬಂದವು? ಹೇಗೇನು? ನಾನು ಮನಸ್ಸು ಮಾಡಿದೆನೆಂದು!

> **ನನಗೆ ಗೊತ್ತು ನನಗೆ ಗೊತ್ತು**
> **ಎಲ್ಲಿ ನಮ್ಮ ಅಪ್ಪನು**
> **ಚಹದ ಕುದಿದು ತುಟಿಯನೊರಸಿ**
> **ಇಟ್ಟ ತನ್ನ ಕಪ್ಪನು**

ಎಂಬಲ್ಲಿಯ ಟ್ರ್ಯಾ:ಕೀ ಛಂದಸ್ಸನ್ನು ಕನ್ನಡದಲ್ಲಿ ನಾನು ತಂದೆ! ಸರಳರಗಳೆ ಹೇಗೆ ಕನ್ನಡದಲ್ಲಿ ಹುಟ್ಟಿದ್ದು ಗೊತ್ತೋ? ವಾಲ್ಮೀಕಿಯಂತೆ ನಾನು ಅಡವಿಯಲ್ಲಿ ತಪಸ್ಸಿಗೆ ಅಂದರೆ ತಪಾಸಿಗೆ ಹೊರಟಿದ್ದೆ. ಅಲ್ಲಿ ಎರಡು ಬಣ್ಣದ ಚಿಟ್ಟೆಗಳು ಒಂದೇ ದೇಟಿನ ಮೇಲೆ ಕುಳಿತು ಹೂಜೇನನ್ನು ಸವಿಯುತ್ತಿದ್ದವು. ಒಬ್ಬ ದನಕಾಯುವ ಹುಡುಗ ಅವೆರಡನ್ನೂ ಹಿಡಿದು ಪಕ್ಕಗಳನ್ನು ಹರಿದುಬಿಟ್ಟ. ಆಗ ನನ್ನ ಬಾಯಿಂದ ಬಂದ ಶಾಪದಿಂದ—

'ದನ ಕಾಯುವಾತನೇ! ಹೋಗು, ನೀ ಕುರಿ ಕಾಯಿ!'

ಎಂಬುದರಿಂದ,— ಸರಳರಗಳೆಯ ಛಂದಸ್ಸು ಹುಟ್ಟಿತು! ನಾನು ಮಾಡಿದ ಒಂದೊಂದು ಕೆಲಸಕ್ಕೆ ಒಂದೊಂದು ಇತಿಹಾಸವಿದೆ, ಡಾಕ್ಟರಸಾಹೇಬ್! ನಾನು ಸಾಹಸ ಪಡದೆ ಇದ್ದರೆ ಆಂಗ್ಲರ ಛಂದಸ್ಸು ಕನ್ನಡದಲ್ಲಿ ಬರಲು ಇನ್ನೂ ನೂರು ವರ್ಷ ಹಿಡಿತಿದ್ದವು; ನೂರು ವರ್ಷ! ನಾನೆಂದರೆ ಏನೆಂದು ತಿಳಿದಿದ್ದೀರಿ ನೀವು?

**ಡಾಕ್ಟರು :—**( ಶಾಂತಚಿತ್ತದಿಂದ) ಏನೂ ಇಲ್ಲ, ಅಭಿನವ ಚಾ:ಸರರೇ! ಸ್ಕ್ರೂ ಲೂಜಾಗಿಬಿಟ್ಟಿರುವದರಿಂದ—ತಲೆ ತುಂಬ ಮಾತನಾಡದೆ ಹೋದರೆ ಹುಚ್ಚು ಹಿಡಿದುಬಿಡುವ ಪ್ರಾಣಿಯೆಂದು ತಿಳಿದಿದ್ದೇನೆ. ಇನ್ನೇನು ತಿಳಿಯಲಿ?

**ಅ. ಚಾ:ಸರ :—** ಹುಚ್ಚು, ಆವೇಶ, ಸ್ಫೂರ್ತಿ— ಇವೆಲ್ಲ ಒಂದೇ ಶಕ್ತಿಗಿರುವ ಬೇರೆ ಬೇರೆ ಹೆಸರುಗಳು. ಹುಚ್ಚಿನಲ್ಲಿ ಸಹ ದೈವಿಕತೆಯಿದೆ, ಡಾಕ್ಟರ್! ಅದಿರಲಿ, ನಾನು ಕನ್ನಡನಾಡಿನ ವರ್ಡ್ಸ್‌ವರ್ಥನೆಂಬುದು ನಿಮಗೆ ಗೊತ್ತಿರಬಹುದಲ್ಲ? ವರ್ಡ್ಸ್‌ವರ್ಥನು " We are seven " ಎಂಬ ಗೀತೆಯನ್ನು ಬರೆದ. ನಾನು 'ಏಳು ಕನ್ನಿಕೆಯರು' ಎಂದು ಇನ್ನೊಂದನ್ನು ಬರೆದಿದ್ದೇನೆ. ಕೇಳಿರಿ ಬೇಕಾದರೆ!

> **ಏಳು ಕನ್ನಿಕೆಯರು ಬಂದು**
> **'ಏಳು ಮಂದಿ ನಾವು' ಎನಲು**
> **ಎಂಟು ಎಂದರೇನು ನಿಮ್ಮ**
> **ಗಂಟು ಹೋಯಿತೆಂದೆನೋ—**
> **ಗಂಟು ಹೋಯಿತೆಂದೆನು.**
> **ನಿಮ್ಮೊಳೊಬ್ಬರಿರಲು ಅಮಮ!**
> **ಡುಮ್ಮಿಯಾಗಿ ಸದ್ದುಮಿದ್ದು**
> **ಎಂಟು ಎಂದರೆನಗೆ ಪಾಪ**
> **ವಂಟದೆಂದು ನುಡಿದೆನೋ— ಅಂಟದೆಂದು ನುಡಿದೆನು.**
> **ಅದಕೆ ಅವರು ಕೋಪಗೊಂಡು**
> **ಕದವ ನೂಕಿ ಹೋದರತ್ತ**
> **ಏಳೆ ಇದ್ದರೇನು ? ಸುಳ್ಳೆ**
> **ಗೋಳುಕಟ್ಟಿಕೊಂಡೆನೋ—ಗೋಳುಕಟ್ಟಿಕೊಂಡೆನು.**
> **ಏಳು ಕನ್ನಿಕೆಯರೆ! ಮತ್ತೆ**
> **ಮೇಳಗೊಂಡು ಬನ್ನಿರವ್ವ!**
> **ಏಳೆ ಇರುವಿರೆಂದು ಹೇಳಿ**
> **ಬಾಳ್ವೆ ನಡಿಯೊಳೆಂದೆನೂ-ಬಾಳ್ವೆನಡಿಯೊಳೆಂದೆನು.**

**ಡಾಕ್ಟರು :—** ವಾ ಹ ವಾ, ಅಭಿನವಚಾ:ಸರರೇ! ನೀವು ವರ್ಡ್ಸ್‌ವರ್ಥ ಎಂಬುದು ನಿಜ. You are worth your words. ನಿಮ್ಮ ಶಬ್ದಗಳಿಗೆ ಬೆಲೆಯಿದೆ,—ಅಲ್ಲಲ್ಲ, ಬೆಲೆಯೇ ಇಲ್ಲ!

**ಅ. ಚಾ:ಸರ್ :—**ನನ್ನ ಕಥೆ ಇಲ್ಲಿಗೇ ಮುಗಿಯಿತೆಂದು ತಿಳಿದಿರಾ! ಕನ್ನಡದ ಶೆಲ್ಲಿಕವಿ ನಾನು! ಅತೀಂದ್ರಿಯ ಪ್ರೇಮಗೀತೆಗಳನ್ನು ಕನ್ನಡದಲ್ಲಿ ಮೊದಲು ಬರೆದವರಾರು? ನಾನು, ಡಾಕ್ಟರ್ ಸಾಹೇಬ್! ಇಲ್ಲಿ ಕೇಳಿರಿ.

ಮುಂಟಬೆಕ್ಕುಗಳಂತೆ ಎಂಟೆದೆಯು ನಲ್ಮೆಯಲಿ
ಗಂಟುಬಿದ್ದೆವು ಒಬ್ಬರೊಬ್ಬರಿಗೆ ನಾವು
ಜಗಳವಾಡುವ ನಮ್ಮ ಹುಟ್ಟಿಸಿದೆನೇಕೆಂಬ
ದೇವರಿಗೆ, ಹೆತ್ತ ಹೆಗ್ಗಣವು ನಾವು.
ಕಾರಿನಲಿ ನಲಿಯುವೆವು ತಾಸಿಗಿನ್ನೂರಾ ಮೈಲು
ಪುಣ್ಯಾತ್ಮ ಕೊಡಲೊಬ್ಬ ತನ್ನ ಕಾರು.
'ನಾ ಹೊಡೆವೆ ನೀ ಹೊಡೆವೆ'ನೆಂಬ ನಲ್ಬಗಳದಲಿ
ಕಾರು ಬಿದ್ದಿರಲಾಗಿ ಚೂರು ಚಾರು!
ಪೋಲಿಗಳು ಮೆರೆಯುವೆವು ಹಾಯಾಗಿ ಝೋಕಾಗಿ
ಮರಣವೆಂಬಂಥ ಹಿಟ್ಲರನು ಬರುವನಕ
ಇನ್ನೊಮ್ಮೆ ಗೆರಸೊಪ್ಪೆ ಟ್ರಿಪ್ಪು ಮುಗಿಸುವೆವಯ್ಯ!
ತಾಳು ಮುಸಲೀನಿಯೋ! ಅಲ್ಲಿತನಕ!

ಅಥವಾ ಈ ಸಲ್ಲಾಪವನ್ನು ಕೇಳಿರಿ!

ನನ್ನ ಮೆಣಸು ನಿನ್ನ ಮೆಣಸು
ನನ್ನ ಘಣಸು ನಿನ್ನ ಘಣಸು
ಒಂದೆ ಎಂಬ ಒಂದು ಭಾವ ನನ್ನೊಳಿದ್ದಿತು.
ಒಂದೆಯಲ್ಲ ಬೇರೆ ಬೇರೆ-
ಯೆಂಬ ತಿಳಿವು ಬಂದ ವೇಳೆ
ನನ್ನ ನಿನ್ನ ನಡುವೆ ಹಿರಿಯ ಜಗಳ ಬಿದ್ದಿತು!
ದಿನವು ನನ್ನ ತಲೆಯ ಮೇಲೆ
ಮೆಣಸರೆಯುವೆ ನೀನು, ಬಾಲೆ!
ಮೆಣಸರೆಯುವ ತನಕ ನಮ್ಮ ಜಗಳ ತಪ್ಪದು.
ಗಡ್ಡೆಗೆಣಸು ತಿಂದು ಬಾಳ್ವೆ
ಇದರ ಕಣಸು ದಿನವು ಕಾಣ್ವೆ
ಇಂಥ ನೀಚ ನನಸು ನಮ್ಮ ಮನೆಯೊಳೊಪ್ಪದು.

**ಡಾಕ್ಟರು**:— ಅಭಿನವ ಚಾಸರರೇ, ಸಾಕುಮಾಡಿರಿ! ಆಂಗ್ಲಕವಿತೆಗಳನ್ನು ಕೇಳಿ ಕೇಳಿ ಬಾಯಲ್ಲಿ ನೀರು ಬಂದು, ವಿಲಾಯತಿಯ ಮಣ್ಣು ತಿಂದು ತಿಂದು,— ನಿಮಗೆ ಪಾಂಡುರೋಗವಾಗಿದೆ! ಈ ರೋಗದಲ್ಲಿ ನಡುವೆ ಅಜೀರ್ಣದಿಂದ ಆಮಾತಿಸಾರವು ಬೇರೆ ಕೂಡಿದೆ! ಅಂತೇ ಒಂದರ ಮೇಲೊಂದು ಕವಿತೆಯನ್ನು ನೀವು ಹೀಗೆ ವಿಸರ್ಜಿಸುತ್ತಿದ್ದೀರಿ; ಮೌನದ ಅಮೃತಬಳ್ಳಿಯನ್ನು ನೀವು ಕೆಲವು ದಿನ ಸೇವಿಸಬೇಕು. ನಲ್, ಕಲ್ ಎಂದು ಬಡಬಡಿಸುವ ನೀವು ತಿಳಿಗನ್ನಡದ ನೆಲ್ಲೀಕಾಯಿ ಚೂರ್ಣವನ್ನು ತೆಗೆದುಕೊಳ್ಳಲೇಬೇಕು. ಇಲ್ಲದಿದ್ದರೆ ನಿಮ್ಮನ್ನು ಹದ್ದುಪಾರುಮಾಡಿ ಆ ಶೇಕ್ಸಪಿಯರ ಏವ್ಹನ್ ನದಿಯ ದಂಡೆಯ ಮೇಲೆ ಬರ್ಫವನ್ನು ತಿನ್ನಿರೆಂದು ಬಿಟ್ಟು ಬರಬೇಕಾದೀತು!

**ಭೀಮು**:— (ತನ್ನ ಕೋಣೆಯೊಳಗಿಂದ ಗಾಬರಿಯಾಗಿ) ದಿನಕರ! ದಿನಕರಾ! ಬೇಗ ಬಾ ಇಲ್ಲಿ.

**ಡಾಕ್ಟರು**:— ಯಾಕೋ ಭೀಮು! ಇಷ್ಟೇಕೆ ಒದರಿಕೊಳ್ಳುತ್ತಿ? ಏನಾಯಿತು?

**ಭೀಮು**:— (ಗಾಬರಿಯಿಂದ ಬಂದು) ಕಿಶೋರ ಕವಿಗಳಿಗೆ ಕಾವ್ಯಸಮಾಧಿ ಬಂದು ಘಟಾರದಲ್ಲಿ ಬಿದ್ದಿದ್ದಾರಂತೆ! ಬಿದ್ದಲ್ಲಿಯೇ ಕವಿತೆ ಹೇಳಲಿಕ್ಕೆ ಸುರುವು ಮಾಡಿದ್ದಾರಂತೆ!

**ಡಾಕ್ಟರು**:— ನಾ ಹೋಗಿ ನೋಡುತ್ತೇನೆ. ನೀನಿಲ್ಲಿ ಸೋಫಾ ಸರಿಪಡಿಸಿ ಒಂದು Smelling Salts ಬಾಟ್ಲಿ ಹಿಡಿದುಕೊಂಡು ನಿಂತಿರು. ಇಲ್ಲಿ ಒಳಗೆ ತಂದು ಅವರನ್ನು ಮಲಗಿಸೋಣ. ಅಭಿನವ ಚಾಸರರೇ! ಕಿಶೋರರನ್ನು ಘಟಾರದೊಳಗಿಂದ ಮೇಲಕ್ಕೆ ತ್ರೋಣ ನಡೆಯಿರಿ. ನಿಮ್ಮಿಂದ ಜನರಿಗೆ ಅಷ್ಟಾದರೂ ಉಪಯೋಗವಾಗಲಿ!

**ಅ. ಚಾಸರ**:— ಅಲ್ಲ, ನಾನು....

**ಡಾಕ್ಟರು**:— ಅಲ್ಲ, ಇಲ್ಲ,— ಏನೂ ಇಲ್ಲ. ನಡೆಯಿರಿ!

(ಕೈಹಿಡಿದು ಕರಕೊಂಡು ಹೋಗುತ್ತಾನೆ.)

**ಭೀಮು**:— (ಸೋಫಾ ಸರಿಪಡಿಸಿ ಹೊದ್ದುಕೊಳ್ಳುವ ಒಂದು ಚಾದರವನ್ನಿಡುತ್ತ) ಮಲರೋಗ ಬಂದಾಗಲಿ, ಮಿತಿಮೀರಿ ಕುಡಿದ ಗುಂಗಿನಲ್ಲಾಗಲಿ ಈ ಕಪಿಗಳು ಎಚ್ಚರ ತಪ್ಪಿ ಘಟಾರದಲ್ಲಿ ಬೀಳುತ್ತಾರೆ. ಅದನ್ನು ನಾವು 'ಕಾವ್ಯಸಮಾಧಿ' 'ಕಾವ್ಯ ಸಮಾಧಿ' ಎಂದು ಗೌರವಿಸುತ್ತೇವೆ. ದೊಡ್ಡವರಿದ್ದರೆ ಕಾವ್ಯಸಮಾಧಿ, ನಮ್ಮಂಥವರಿದ್ದರೆ ಮಲರೋಗ,— ಜಗತ್ತಿನ ನಿಯಮವೇ ಹೀಗೆ.

(ಡಾಕ್ಟರರೂ ಶರಣೇಂದ್ರ ಕವಿಗಳೂ ಕಿಶೋರ ಕವಿಗಳನ್ನೆತ್ತಿಕೊಂಡು ಬರುತ್ತಾರೆ. ಶರಣೇಂದ್ರ ಕವಿಗಳು 'ಮದ್ರಾಸಿ'ಯವರ ಹಾಗೆ ಧೋತರವುಟ್ಟು 'ಮುಕಪ್ಪ'ದ ಕೂದಲವನ್ನಷ್ಟು ತಲೆಯ ಮೇಲೆ ಬಿಟ್ಟಿದ್ದಾರೆ. ಉದ್ದ ಕೋಟೊಂದನ್ನು ಹಾಕಿರುತ್ತಾರೆ. 'ಶಿರಸ್ತ್ರಾಣ'ವನ್ನು ಅವರು ಧರಿಸುವದಿಲ್ಲ. ಅವರ ಮೋರೆಯ ಮೇಲೆ ಸಾಕಷ್ಟು ಮೀಸೆಗಳಿವೆ. ಕಿಶೋರ ಕವಿಗಳಂತೆ ಅವರು ಮೀಸೆಯ ಭಾರವನ್ನು ಇಳಿಸಿಲ್ಲ. ಮುಂದೊಮ್ಮೆ ಕಿಶೋರ ಕವಿಗಳು ಎದ್ದು ನಿಂತು ಅವರ ಪೋಷಾಕು ಕಂಡಾಗ,— ನಿರಿಗೆಗಳನ್ನು ಮುರಿಯದೆ ಅವರು ಜರದಂಚಿನ ಧೋತರವನ್ನುಟ್ಟಿರುವದೂ, ಬಿಳಿಯ ಬನೀನು ಶರ್ಟು ಹಾಕಿರುವದೂ ಹಾಗೂ ಬಂಗಾಲಿ ಬಾಬುಗಳಂತೆ ಒಂದು ಶೆಲ್ಲೆಯನ್ನು ಹೊತ್ತಿರುವದೂ ಕಂಡು ಬರುತ್ತದೆ.)

**ಡಾಕ್ಟರು**:— ಹೂಂ! ಭೀಮೂ, Smelling Salts!

**ಭೀಮು :**—ಇಲ್ಲಿದೆ. ( ಕೊಡುತ್ತಾನೆ. ಬೂಚು ತೆಗೆದು ಬಾಟ್ಲಿಯನ್ನು–ಸೋಫಾದ ಮೇಲೆ ಮಲಗಿಸಿದ ಕಿಶೋರ ಕವಿಗಳ ಮೂಗಿಗೆ ಹಚ್ಚಿದೊಡನೆ ಅವರು ಮಿತಿಮೀರಿ ಕೆಮ್ಮುತ್ತ ಒಂದು ಮಗ್ಗುಲಿಂದ ಇನ್ನೊಂದು ಮಗ್ಗಲಿಗೆ ಹೊರಳಿ ಒಮ್ಮೆ ಕಣ್ಣು ತೆರೆದು ಮತ್ತೆ ಮುಚ್ಚಿಕೊಳ್ಳುತ್ತಾರೆ.)

**ಡಾಕ್ಟರ :**—ಭೀಮು ! ನಿನ್ನ ಕೋಣೆಗೆ ನಡೆ. ನಾನೂ ಬರುತ್ತೇನೆ. ಐದು ಹತ್ತು ನಿಮಿಷ ಕಿಶೋರರಿಗೆ ಸಂಪೂರ್ಣ ಎಚ್ಚರಾಗುವ ವರೆಗೆ ಶರಣೇಂದ್ರ ಕವಿಗಳೊಬ್ಬರೇ ಅವರ ಹತ್ತರ ಇರಲಿ. ಶರಣೇಂದ್ರರೇ, ಇಲ್ಲಿಯೇ ಕುರ್ಚೆಯ ಮೇಲೆ ಕೂಡಿರಿ ನೀವು.

( ಭೀಮು ಹಾಗು ಡಾಕ್ಟರರು ಹೋಗುತ್ತಾರೆ ಶರಣೇಂದ್ರರು ಕಿಶೋರ ಕವಿಗಳ ತಲೆಯ ಬದಿಗೆ ಕುರ್ಚೆಯ ಮೇಲೆ ಕುಳಿತು ಕೊಳ್ಳುತ್ತಾರೆ. )

**ಕಿಶೋರಕವಿ:**—( ಇನ್ನೂ ಕಾವ್ಯಸಮಾಧಿಯ ಮಬ್ಬಿನಲ್ಲಿ )

**ಕಾಫಿಯು ನಾನು ಚಹವೂ ನಾನು**
**ಅದ ಗಟ ಗಟ ಗಟ ಕುಡಿದವ ನಾನು**
**ಕುಡಿದೂ ಇಲ್ಲೆಂದೆನುವವ ನಾನು**
**ಶಿವಾ ಶಿವಾ ! ಹರ ! ಸಾಂಬ ಶಿವಾ !**

**ಶರಣೇಂದ್ರ :**— ಎಲೋ ! ಮಳ್ಳೇ, ಹತ್ತು ಬಾಟ್ಲಿ ಸ್ಮೆಲಿಂಗಸಾಲ್ಟ ಡಾಕ್ಟರು ಮೂಗಿಗೆ ಹಿಡಿದಾಗ ಎಚ್ಚರಾತು ನಿನಗೆ ! ಇನ್ನೂ ನೀಲಗಿರಿ ತಾಳದ ಕಾಫೀರಾಗದಲ್ಲಿದ್ದೀ !

**ಕಿಶೋರಕವಿ :**— ( ಇನ್ನೂ ಮಬ್ಬಿನಲ್ಲಿ )

**ಚಹವನು ಕುಡಿಯದೆ ಬಾಳುವದೆಂತು ?**
**ಕುಡಿಯದ ಪ್ರಾಣಿಯು ಕೇಳು ವಿತಂತು !**
**ಆಕಳು ನಾನು.ಹಾಲೂ ನಾನು**
**ಆಕಳ ತಿನ್ನುವ ಪ್ರಾಣಿಯು ನಾನು**
**ನಾನೂ ನೀನು ನೀನೂ ನಾನು !**
**ಶಿವಾ, ಶಿವಾ ಹರ ! ಸಾಂಬ ಶಿವಾ !**

**ಶರಣೇಂದ್ರ :**—ಏ ಶತಮೂರ್ಖಾ ! ಇನ್ನೂ ಮಬ್ಬು ಬಿಟ್ಟಿಲ್ಲ. ಆ ನಮ್ಮ ಎರಡನ್ನೂ ಡಕ್ಕ ರತ್ನನ ಹೆಂಡವನ್ನಿಷ್ಟು ತಂದು ಕೊಡಲೇನು ? ಸಮಾಜಸೇವೆಯನ್ನು ಯಾವ ಕವಿ ಮಾಡುವದಿಲ್ಲವೋ ಅವನನ್ನು ಜನತಾ ಜನಾರ್ದನನು ಹೀಗೆಯೇ ಅಧೋಗತಿಗೆ ಇಳಿಸುತ್ತಾನೆ ! ವೇದಾಂತವನ್ನು ಕುರಿತು ಕವಿತೆ ಬರೆಯಲು ಹೊರಟರೆ ಆಗುವದೇ ಹೀಗೆ ! ಇನ್ನಾದರೂ ನನ್ನ ದಾರಿ ತುಳಿ ನೀನು.

**ಕಿಶೋರಕವಿ :**— ( ಅರ್ಧ ಎಚ್ಚರದಲ್ಲಿ ) ಯಾರವರು ? ನನ್ನ ಕಾವ್ಯಸಮಾಧಿಯನ್ನು ಭಂಗಿಸಬೇಡಿರಿ. ರವರವ ನರಕಕ್ಕೆ ಹೋಗಬೇಕಾದೀತು !

**ಹೊಲವೂ ನಾನು ಬೇಲಿಯು ನಾನು**
**ಹಲೆಹಲೆ ಎನ್ನುವ ಹಳಬನು ನಾನು**
**ಹೆಣ್ಣೂ ನಾನು ಗಂಡೂ ನಾನು**
**ಹೆಣ್ಗಂಡಿರದ ನಪುಂಸಕ ನಾನು**
**ನಾನೂ ನೀನು ನೀನೂ ನಾನು**
**ಶಿವಾ ! ಶಿವಾ ! ಹರ ! ಸಾಂಬ ಶಿವಾ !**

**ಡಾಕ್ಟರು:**—( ಒಳಗಿನಿಂದ ಸಿಟ್ಟಾಗಿ ಬಂದು ) ಏನು ! ಕವಿಗಳಿಗೆ ಸಮಾಧಿಯಿಂದ ಎಚ್ಚರವಾಯ್ತೆ ? ಅವರ ಬಾಯಿಗೆ ಮತ್ತೆ ಬೀಗ ಹಾಕಬೇಕೇ ? ಇಕಾ, ಕಿಶೋರ ಕವಿಗಳೇ ! ನೀವು ಸುಮ್ಮನಾಗದೆ ಇದ್ದರೆ ಕ್ಲೋರೋಫಾರ್ಮ ಕೊಡಬೇಕಾದೀತು. ನಿಮ್ಮ ಕವಿತೆಗಳನ್ನು ಕೇಳಿ ಕಿವಿಗಳು ಕಾದುಹೋಗಿವೆ. ಎಲ ! ಮತ್ತೆ ಬಾಯಿ ಬಿಡುತ್ತೀರಲ್ಲ ! ಇದಕ್ಕೆ ಇನ್ನೊಂದು ಯುಕ್ತಿ ಮಾಡುತ್ತೇನೆ. ಇನ್ನೇನಾದರೂ ಈ ಕವಿತೆ ನೀವು ಮುಂದುವರಿಸಿದರೆ,—ನಿಮಗಿಂತ ಶೀಘ್ರವಾಗಿ ಆಂಗ್ಲ ಕವನವನ್ನು ನಾನು ಹೊಸೆಯುತ್ತೇನೆ. ಇಲ್ಲೇ ನಮ್ಮ ಶರಣೇಂದ್ರ ಕವಿಗಳಿದ್ದಾರೆ. ಅವರು ನಮ್ಮ ಜಿದ್ದನ್ನು ನೋಡಲಿ.

**ಕಿಶೋರಕವಿ :**— ( ಮೊದಲಿನಂತೆ )

**ದೌತಿಯೊಳಿರುವಾ ಮಸಿಯೂ ನಾನು**
**ಮೈಯೊಳಗಿನ ಬಣಹಸಿಯೂ ನಾನು**
**ಎದೆಹೊಟ್ಟೆಯೊಳಿಹ ಕಸಿವಿಸಿ ನಾನು**
**ಸಾಂಬಶಿವಾ ! ಹರ ! ಸಾಂಬಶಿವಾ !**

**ಡಾಕ್ಟರು :**— ಅಹಾ ! ಕವಿಗಳೆಂದರೆ ನೂತನ ಬ್ರಹ್ಮ, ನೂತನ ಬ್ರಹ್ಮ ಎಂದು ಹೇಳುತ್ತಾರಲ್ಲ,— ಅದೇ ಇರಬೇಕು ಈ ಮಾತು : ನಾನು ನೂತನತರ ಬ್ರಹ್ಮವನ್ನು ವಿವರಿಸುತ್ತೇನೆ,—ಕೇಳಿರಿ ; ( **ಕಿಶೋರ ಕವಿಗಳ ಕಡೆಗೆ ಬೊಟ್ಟು ಮಾಡಿ** )

You're the Top,
You're Mahatma Gandhi,
You're the Top,
You're Napoleon Brandy,
You're the purple light,
Of a Summer Night
In Spain
You're the National Gallery,
You're Garbo's Salary,
You're Cellophane,

**ಕಿಶೋರಕವಿ:—** (ಚಟಕ್ಕನೆ ಎದ್ದು) ನನ್ನ ಕಾವ್ಯ ಮಾರ್ಗದವನಾವನೋ ತನ್ನ ಕವಿತೆಯನ್ನೆ ಹೇಳುತ್ತಿರುವಂತೆ ಕೇಳುವದಲ್ಲ! ನನ್ನಿಂದ ಅವನು ಕಲಿತನೋ, ಅವನಿಂದ ನಾನು ಕಲಿತೆನೋ? ನನ್ನಿಂದ ಅವನು ಎಬ್ಬಿಸಿದನೋ, ಅವನಿಂದ ನಾನು ಎಬ್ಬಿಸಿದೆನೋ,— ಇದು ಒಬ್ಬರಿಗೂ ತಿಳಿಯದ ಮಾತು, ಜಾ! ನನ್ನ ಕಾವ್ಯಬಂಧು! (ಡಾಕ್ಟರರನ್ನು ತಬ್ಬಿಕೊಳ್ಳಲು ಮುಂದೆ ಸಾಗುವನು.)

**ಡಾಕ್ಟರು:—** ನಾವು ನಿಮ್ಮ ಕಾವ್ಯವೂ ಅಲ್ಲ, ಬಂಧುವೂ ಅಲ್ಲ, ಕಾವ್ಯಬಂಧುವೂ ಅಲ್ಲ. ನಿಮ್ಮ ಹುಚ್ಚಿನಲ್ಲಿ ನನಗರ್ಧ ಪಾಲು ಕೊಡಲು ಬಂದಿರೇನು? ಎಚ್ಚರಾಗಿದ್ದರ ಮುನ್ನೋಡಿ ನಮ್ಮ ಆಫೀಸ್ ಬಟ್ಟು ಮುಂದೆ ಸಾಗಿ ಹೋಗಿರಿ.

**ಶರಣೇಂದ್ರ:—**ಬನ್ನಿರಿ, ಕಿಶೋರಕವಿಗಳೇ! ಇನ್ನು ಹೋಗೋಣ ಬನ್ನಿರಿ. ಈಗ ನಿಮಗಾದ ಪರಾಮರ್ಶೆ ಸಾಕಾಗಿಲ್ಲವೇ!

**ಕಿಶೋರಕವಿ:—** ಇದೇನು! ತತ್ತ್ವವು ನಿಮಗೆ ಗೊತ್ತಿರದಿದ್ದರೇನಾಯಿತು? ಸ್ಫೂರ್ತಿಯು ನಿಮ್ಮಲ್ಲಿರುವದು ಸುಳ್ಳೆ? ನಾವು ಕವಿಗಳು. ವಿಕ್ಷಿಪ್ತ ಬ್ರಹ್ಮವೇ—ನಮ್ಮ ಕೈಗಂಟು. ನಮ್ಮ ಬರವಣಿಗೆಯೇ ನಮ್ಮ ಬ್ರಹ್ಮಲಿಪಿ. ನಮ್ಮ ವಾಹನ ವೇದಾಂತಕ್ಕೇ—ಸರಿ! ನಾವೆಂಬುದು ಸುಳ್ಳು. ಬರಿ ಮಾತು. ದೇವನೇ ಈ ಕವನಗಳನ್ನೆಲ್ಲ ಬರೆವ. ಅದೇ ನಮ್ಮ ಹಣೆಬರಹ. ಕಣ್ಗೆಕಾಣ್ವ ಲೋಕವೆಲ್ಲ ಒಂದು ಭಂಗಿ.

**ಡಾಕ್ಟರು:—** (ಗಾಬರಿಯಾಗಿ) ಒಂದು ಏನು?

**ಕಿಶೋರಕವಿ:—** ಒಂದು ಭಂಗಿ.

**ಡಾಕ್ಟರು:—** ಓಹೋ ದೇವರಿಗೆ ಈ ಹೊಸ ಕೆಲಸವನ್ನು ಬೇರೆ ಕೊಡಬೇಕೆಂದಿದ್ದೀರಾ ನೀವು? ಒಹಳ ಚೆನ್ನಾಗಿದೆ. ಶುಭಸ್ಯ ಶೀಘ್ರಂ. ಇಲ್ಲಿಂದ ನೀವು ಎಷ್ಟು ಬೇಗನೆ ಹೋಗುವಿರೋ ಅಷ್ಟು ನಿಮಗೆ ಒಳ್ಳೆಯದು.

**ಕಿಶೋರಕವಿ:—** ಹೋಗುತ್ತೇನೆ, ಡಾಕ್ಟರೆ, ಒಂದಿಲ್ಲೊಂದು ಸಲ ಪ್ರತಿಯೊಬ್ಬನೂ ಹೋಗಲೇಬೇಕು. We have our exits and our entrances.

**ಶರಣೇಂದ್ರ:—** ನಮ್ಮ ದೇಶದಲ್ಲಿ ಈಗ ಗೋಳು ಒಂದಿರುವದು ಅದೇ ಕಾರಣ. We have more entrances than exits. ದೇಶದಲ್ಲಿ ಕೂಳೇ ಇಲ್ಲ. ಆದರೆ ನೋಡಿದಲ್ಲೆಲ್ಲ ಮಂದಿ—ಮಂದಿ, ಮಂದಿ!

ಬಸ್ಸಿನಲೀ
ಪೆನ್ನಸ್ಸಿನಲಿ.

**ಡಾಕ್ಟರು:—** ಓಹೋ ನೀವೂ ಕವಿತೆಗೆ ಪ್ರಾರಂಭಿಸಿದಿರಾ?

**ಶರಣೇಂದ್ರ:—** ನಮ್ಮ ಕವಿತೆ ಬೇರೆ, ಡಾಕ್ಟರೇ! ನಾವು ಬ್ರಹ್ಮೋ ಸಮಾಜದವರು,—ಅಂದರೆ ಸಮಾಜವೇ ಬ್ರಹ್ಮವೆಂದು ತಿಳಿಯುವ ಪಂಥದ ಕವಿಗಳು ನಾವು. ನಮಗೆ ಶೈಲಿಯ ವಿಷಯ ಕೇಳಿದರೆ—ಸಮಾಜದಂತೆ ನಮ್ಮ ಶೈಲಿಯೆಂದು ಹೇಳುತ್ತೇವೆ. ನಮ್ಮ ಇಂದಿನ ಸಮಾಜದಂತೆ ಒಂದು ಕಾಲು ಪಾಲು ಸಂಸ್ಕೃತ, ಒಂದೂ ವರೆಕಾಲು ಇಂಗ್ಲೀಷು, ಅರೆಕಾಲು ಉರ್ದು, ಅರೆಕಾಲು ಮರಾಠಿ-ತಮಿಳು, ಅರೆಪ್ರಾಣ ಕನ್ನಡ,—ಹೀಗೆ ಶಬ್ದಗಳನ್ನು ಕೂಡಿಸಿ ನಾವು ಹೊಸದೊಂದು ಕನ್ನಡವನ್ನು ತಯಾರಿಸಿದ್ದೇವೆ. ಇಂದಿನ ಸಮಾಜವು ಬೇನೆ ತಿನ್ನುತ್ತಲಿದೆ. ನಮ್ಮ ಕಾವ್ಯಕ್ಕೂ ಸಂಧಿವಾತ ಹಿಡಿದಿದೆ. 'ವೈಯಾಕರಣಿ' ಎಂಬ ಶಬ್ದದೊಳಗಿನ ಬಯ್ಯಾರವೊಂದು ನಮ್ಮ ಕಣ್ತೆಗುಳಿದೆ ವ್ಯಾಕರಣವು ಹೊರಟು ಹೋಗಿದೆ. ಅದರ ತೀರ್ಥವೊಂದನ್ನು ಸ್ವೀಕರಿಸಿ ನಾವು ಸುಮ್ಮನಿದ್ದೇವೆ. ಆದರೆ—ನಮ್ಮ ಕಾವ್ಯಕ್ಕೆ ಉದ್ದೇಶವಿದೆ.

'ಏಳು ಮುಗ್ಗಲಗೇಡಿ!
ಏಳಲೇ! ಏ! ಖೋಡಿ!
ಏಳು, ಬಂತು ದರೋಡಿ!'

ಎಂದು ದೇಶದ ದರೋಡೆಯನ್ನು ತಡೆಯಲು ನಾವು ಜನರನ್ನು ಕರೆಯುತ್ತಲಿದ್ದೇವೆ:

'ಚಟಪಟ ಹೆಣ್ಣಿನ ತಲಿಯನು ಕೆರಿಯಾಕ
ತೆಂಗಿನ ಕಾಯೇನೋ! ಬಿಕನಾಶಿ!'

ಎಂದು ರಂಡೆಮುಂಡೆಯರ ತಲೆಯನ್ನು ಬೋಳಿಸುವ ಮುಂಡೇಗಂಡರಿಗೆ ನಾವು ಬಯ್ದಿದ್ದೇವೆ.

**ಡಾಕ್ಟರ:—** ಓಹೋ! ಮೊದಲೇ Safety Razors ಹೊರಟು ಹಜಾಮರಿಗೆ ಗಿರಾಕಿ ಕಡಿಮೆ. ವಿಧವೆಯರೂ Valet Razor ಇಟಕೊಂಡರೆ ಮುಂದೆ ಹಜಾಮರ ಗತಿಯೇನು?

**ಶರಣೇಂದ್ರ:—**ಹಾಗಲ್ಲ, ಡಾಕ್ಟರಸಾಹೇಬ! ಪಾಪ, ಆ ಹೆಣ್ಣುಮಕ್ಕಳ ತಲೆಯ ಮೇಲೆ ಕೂದಲು ಕೊಟ್ಟಿದ್ದೇವೆ ನಾವು. ಅದಿರಲಿ, ಮುಂದೆ ಕೇಳಿರಿ.

ಭಂಡನಾಗಬ್ಯಾಡಾ |
ಜಗದೊಳು
ಹೆಂಡವ ಕುಡಿಬ್ಯಾಡಾ ||
ಹೇಡಿವ ಕುಡಿದೂ ಕಂಡ ಕಂಡ ಹಾಂಗ
ದುಡ್ಡು ದುಗಾಣಿ ಕಳಕೋಬ್ಯಾಡಾ !
ಫಂಡಿಗೆ ಕೊಡು ಮೂಢಾ
ಜಗದೊಳು,
ಫಂಡಿಗೆ ಕೊಡು ಮೂಢಾ !'

ಎಂದು ಜನರಿಗೆ,— ಫಂಡಿಗೆ ದುಡ್ಡು ಕೊಡಿರಿ, ಎಂದು ಉಪದೇಶ ಮಾಡಿದ್ದೇವೆ!

**ಕಿಶೋರಕವಿ :—** ಈ ಫಂಡಿನ ಕಲ್ಪನೆಯನ್ನು ಶರಣೇಂದ್ರರು ಕೆಡಿಸಿಬಿಟ್ಟಿದ್ದಾರೆ. ನೋಡಿರಿ ಡಾಕ್ಟರೇ, ಅದು ಹೀಗೆ ಬರಬೇಕು—ಬೇಕಾದರೆ ಶರಣೇಂದ್ರರ ಅಚ್ಚಗನ್ನಡದಲ್ಲಿ—ರತ್ನದಂಥ ಕನ್ನಡದಲ್ಲಿ—ಹೇಳುತ್ತೇನೆ.

ಝನುಕುಲವೆ ಹಿರಿದಂಡು
ಜಗದ ದುಡ್ಡೇ ಫಂಡು
ಫಂಡಿಗಿರುವಾ ಟ್ರಸ್ಟಿ ದೇವ ನೋಡು
ಇರಲಿ ಅವನೊಳು ಟ್ರಸ್ಟು
ಒಂದು ಬ್ರೆಡ್ಡಿನ ಕ್ರಸ್ಟು
ದೊರಕೀತು ತುಳಿಯುತಿರೆ ನೀನು ರೋಡು |

ಕವಿತೆಯಲ್ಲಿ ದೇವರ ಹೆಸರಿಲ್ಲದೆ ನಾಲಗೆಯನ್ನೇ ಎತ್ತಬಾರದು. ವಿಶ್ವಚಕ್ರದ ನಿತ್ಯಭ್ರಮಣವನ್ನು ತೋರಿಸುವ ಚಕ್ರವಾಕ್ ಎಂದರೇ ಕವಿ. ವಿಶ್ವವೇ ಕವಿಯ ಅಶ್ವವಾಗಬೇಕು. ಇವನು ಅಶ್ವಘೋಷನಾಗಬೇಕು. ಟೊಂಗೆಯಿಂದ ಟೊಂಗೆಗೆ ಹಾರಿದಂತೆ ಯಾವಾಗಲೂ ಕೈಲಾಸದಿಂದ ವೈಕುಂಠಕ್ಕೆ, ವೈಕುಂಠದಿಂದ ಕೈಲಾಸಕ್ಕೆ ಹಾರುತ್ತಿರಬೇಕು ಕವಿ !

**ಶರಣೇಂದ್ರ :—** ಹಾಗಲ್ಲ, ಡಾಕ್ಟರ್ ! ಕವಿಯ ಮಂಗತನದ ರೀತಿ ಬೇರೆಯಾಗಿದೆ. ಅವನು ಮಂಗನಂತೆ ಹಾರಿ ಪೂಜೆಯ ಮನೆಯೊಳಗಿನ ದೇವರನ್ನು ಕೆಡವಬೇಕು. ತೊಟ್ಟಿಲಕ್ಕೆ ಬಾಸಿಂಗ ಕಟ್ಟುವವರ ಕೊಳ್ಳಿಗೆ ಅವನು ಘಂಟೆ ಕಟ್ಟಬೇಕು. ಗಂಡ ಸತ್ತ ಹೆಣ್ಣಿನ ತಲೆ ಬೋಳಿಸುವ ಮೂರ್ಖರ ಹುಬ್ಬುಗಳನ್ನು ಇವ ಮೊದಲು ಬೋಳಿಸಬೇಕು. ಶ್ರಾದ್ಧ ಮಾಡುವವರ ಪಕ್ಷವನ್ನು ಇವ ಮೊದಲು ಮಾಡಿಯೇತೀರಬೇಕು. ದಕ್ಷಿಣೆ ಬೇಡುವ ವರನಿಗೆ ಇವ ಉತ್ತರವನ್ನು ಮಾತ್ರ ಕೊಟ್ಟಿರಬೇಕು,— ಉತ್ತರೀಯವನ್ನು ಸಹ ಕೊಡಬಾರದು. ಹೀಗೆ ಕವಿ ಬೇನೆಯಿಂದ ಬಳಲುತ್ತಿರುವ ನಮ್ಮ ಸಮಾಜಕ್ಕೆ ಒಂದರ ಮೇಲೊಂದು ಇಂಜೆಕ್ಷನ್ ಕೊಟ್ಟಿರಬೇಕು—ಇಂಜೆಕ್ಷನ್!

**ಕಿಶೋರಕವಿ :—** ಛೆ, ಎಂದಿಗೂ ಆಗದು. ಭಕ್ತಿಯ ಕರ್ಣರಸಾಯನವನ್ನು ಮಾಡಿ ಕವಿಯು ಜನರ ಕಿವಿಯಲ್ಲಿ ಹಿಂಡಬೇಕು, ಅವರ ಕಿವಿಯನ್ನು ಹಿಂಡಬಾರದು. ತನ್ನ ಆವೇಶದಲ್ಲಿ ಜನರಿಗೆ ಜ್ಞಾನಾಮೃತವನ್ನು ಕುಡಿಸಬೇಕು ಕವಿ.

**ಡಾಕ್ಟರು :—** ಇಲ್ಲಿ ನೋಡಿರಿ ! ನಿಮ್ಮ ತತ್ತ್ವತತ್ತ್ವಗಳ ಬಡಿದಾಟದಲ್ಲಿ ನನ್ನ ಸತ್ತ್ವವೇ ಹೋಗುವ ಪ್ರಸಂಗ ಬಂದಿತು. ನಿಮ್ಮ ಉಳಿದ ರೋಗಗಳನ್ನು ಕಳೆಯಬಹುದು. ನೋನಾ ಮುಖಿಯನ್ನು ಕೊಟ್ಟರೆ ನಿಮ್ಮ ಗಂಟು ಗಂಟು ಶಬ್ದಗಳೆಲ್ಲ ಮಾಯವಾಗಬಹುದು. ಆದರೆ ಈ ಕಾವ್ಯದೃಷ್ಟಿ ನಿಮಗೆ ಬಡಿದುಕೊಂಡಿರುವದಕ್ಕೇನು ಮಾಡಲಿ ? . . ಭೀಮೂ, ಇಲ್ಲಿ ಆ ಮೈಕ್ರೋಸ್ಕೋಪು— ಆ ಸೂಕ್ಷ್ಮದರ್ಶಿ ಯಂತ್ರವನ್ನು ತಂದುಕೊಡು.

**ಭೀಮು :—**( ಒಳಗಿಂದ ) ತಂದೆ.

**ಡಾಕ್ಟರು :—** Binocularsಊ ಬೇಕು !

**ಭೀಮು :—**( ಒಳಗಿಂದ ) ಅವನ್ನೂ ತಂದೆ.

( ಭೀಮು ಎರಡೂ ಸಾಮಾನುಗಳನ್ನು ತಂದುಕೊಡುತ್ತಾನೆ )

**ಡಾಕ್ಟರು :—** ( ಟೇಬಲ್ಲಿನ ಮೇಲಿನ ಬರಿ ಕೊಳವೆಯನ್ನು ತೆಗೆದುಕೊಂಡು ) ಕಿಶೋರಕವಿಗಳೇ, ಇದರೊಳಗಿಂದ ಆ ಸುಣ್ಣದ ಗೋಡೆಯ ಕಡೆಗೆ ನೋಡಿರಿ. ನಿಮಗೇನು ಕಾಣುತ್ತದೆ ?

**ಕಿಶೋರಕವಿ :—** ( ನೋಡುತ್ತ ) ಏನಿಲ್ಲ. ಬರಿ ಗೋಡೆಯಾಗಿದೆ. ಮೇಲೆ ಬರೆದ ಸುಣ್ಣವಿಷ್ಟು.

**ಡಾಕ್ಟರು —** ನಾನು ಹೇಳುವದೂ ಅದೇ. ಪರಬ್ರಹ್ಮದ ಕೈಯಲ್ಲಿ ಸಿಕ್ಕು, ಪಾಪ, ಸತ್ತು ಸುಣ್ಣವಾಗಿದ್ದೀರಿ ನೀವು. ಎಲ್ಲವೂ ನಿಮಗೆ ಶೂನ್ಯವಾಗಿ ಕಾಣುತ್ತದೆ. ಇನ್ನು ಇದರೊಳಗಿಂದ ನೋಡಿರಿ. ಆ ಕಿಡಿಕೆಯೊಳಗಿಂದ ದೃಷ್ಟಿ ಹೋಗಲಿ. ( Binoculars ಕೊಡುತ್ತಾನೆ)

**ಕಿಶೋರ :—** ಇದೇನು, ಡಾಕ್ಟರೇ, ದೂರಿನ ಮುಗಿಲು ಹತ್ತಿರ ಬಂದಂತೆ ಕಾಣುವದಲ್ಲ ! ಅದೋ ಅಲ್ಲಿ—ನದಿ ಯಾಚೆಗೆ ನಾಲ್ಕು ಮರಗಳಿವೆ—ಹುಣಸಿ ಮರಗಳು. ಆ ನಾಲ್ಕು ಮರಗಳ ಮೇಲೆ ಮೂರು ಮಂಗಗಳು

ಕೂತಿರುತ್ತವೆ. ಆ ಮೂರು ಮಂಗಗಳಲ್ಲಿ ಒಂದರ ಬಾಲವಿಲ್ಲ. ಅಲ್ಲ – ಆ ಬಾಲ,—

**ಡಾಕ್ಟರು :—** ಆ ಬಾಲವೇನು ?

**ಕಿಶೋರ :—** ಎತ್ತಿದ ಕೈಯಂತೆ ಆ ಬಾಲವನ್ನು ಮಂಗವು ಮೇಲೆ ನಿಲ್ಲಿಸಿದೆ ನೋಡಿರಿ, ಡಾಕ್ಟರೆ ! ( ಯಂತ್ರವನ್ನು ಕೊಡಲು ಹೋಗುತ್ತಾನೆ).

**ಡಾಕ್ಟರು :—**( ನಕ್ಕು ) ನಾನು ನೋಡಿಯೇ ಇದ್ದೇನೆ ನೀವು—ಕವಿಗಳು—ನೋಡಬೇಕದನ್ನು !

**ಕಿಶೋರ :—** ಇದೆಂಥ ಚಮತ್ಕಾರ ಡಾಕ್ಟರೇ, ಇದರ ಹೆಸರೇನು ?

**ಡಾಕ್ಟರ :—** ಟೆಲಿಸ್ಕೋಪ್.

**ಕಿಶೋರ :—** ಓಹೋ ! ಇದೇ ಏನು ಟೆಲಿಸ್ಕೋಪು ! ನಮ್ಮ ಸಾಯನ್ಸ ಪ್ರೊಫೆಸರರು ಇದರ ಹೆಸರು ಹೇಳುವದನ್ನು ಮಾತ್ರ ಕೇಳಿದ್ದೆ;— ನೋಡಿರಲಿಲ್ಲ. ಕವಿಕೃತಿಯೆಂದರೆ ಟೆಲಿಸ್ಕೋಪಿನಂತಿರಬೇಕು . .

**ಡಾಕ್ಟರು :—** ಮತ್ತೆ ನೀವು ವಿಕೋಪಕ್ಕೆ ಹೋಗಬೇಡಿರಿ. ಈಗಿನ ನಿಮ್ಮ ಕಾವ್ಯದೃಷ್ಟಿ ಈ ಟೆಲಿಸ್ಕೋಪಿನಂತಿದೆ. ನಿಮಗೆ ಮುಗಿಲು ಕಾಣುವದು. ಆದರೆ ಭೂಮಿಯೇ ಕಾಣುವದಿಲ್ಲ. ನೀವು ಒಂದು ಮುಕ್ಕು ಚಿಕ್ಕೆ ಕಾಳನ್ನು ಬಿತ್ತಲು ಮುಗಿಲು ಹತ್ತುವಿರಿ. ಆದರೆ ಕಾಲ್ಕೆಳಗಿದ್ದ ಜೋಳದ ಕಾಳನ್ನೆಲ್ಲ ತುಳಿದು ಹಾಳು ಮಾಡುವಿರಿ ! 'ಶುಭ್ರ ಶುಭ್ರ' ಎಂದು ಕನಕರಿಸಿ ಎಲ್ಲ ಕಡೆಗೆ ಬೆಳ್ಳಗಿನ ಬೂದಿಯಂತಹ ಶೂನ್ಯವನ್ನೇ ಕಾಣುವ ನೀವು ಅಭ್ರಭಸ್ಮವನ್ನು ಮಿತಿ ಮೀರಿ ತೆಗೆದುಕೊಂಡಂತೆ ಕಾಣುತ್ತದೆ. "ಮುದ್ದು ಮುದ್ದು" ಎಂದು ಸದ್ದು ಮುದ್ದಾದ ಭಾವವೊಂದನ್ನು ಕಂಡ ನೀವು ಮುದ್ದಿಸುವ ತುಟಿಗಳನ್ನು ಎಂದಾದರೂ ನೋಡಿದ್ದೀರಾ ? 'ಏಕಮೇವಾದ್ವಿತೀಯಂ' ಎಂದು ಒಂದೇ ದೇವರನ್ನು ಭಜಿಸುವ ನೀವು 'ಏಕಂ ಸತ್ ವಿಪ್ರಾ ಬಹುಧಾ ವದಂತಿ' ಎಂಬ ಮಾತನ್ನು ಕೇಳಿದ್ದೀರಾ ? ಟರ್ನರನ ಚಿತ್ರಗಳನ್ನು ಮೊದಲನೆಯ ಸಲ ನೋಡಿದರೆ,— ಬರಿ ಹಿಂಮಂಜು ಬಡಿದಂತೆ ಕಾಣುತ್ತದೆ. ನಿಮಗೆ ನಮ್ಮ ಜಗತ್ತು ಹಾಗೆಯೇ ಕಂಡಿದೆ. ಆದರೆ ದಿಟ್ಟಿಸಿ ನೋಡಿದಾಗ ಟರ್ನರನ ಚಿತ್ರಗಳಲ್ಲಿದ್ದ ಮೇರಿ–ಕ್ರಿಸ್ತರು, ನಾವಿಕ-ಕಪ್ತಾನರು, ಹಡಗುಪಡೆ ಸೈನ್ಯಗಳು,— ಎಲ್ಲ ಚಿತ್ರಸೃಷ್ಟಿಯೂ ನಿಚ್ಚಳವಾಗಿ ಕಾಣುತ್ತದೆ. ನೀವೂ ಜಗತ್ತನ್ನು ಹಾಗೆ ನೋಡಲು ಕಲಿಯಬೇಕು. ಭೀಮೂ, ಇವರಿಗೆ ಆದರ್ಶಾಂಧತೆಯ ಪರಿ ಬಿಚ್ಚುವಂಥ ವಾಸ್ತವಿಕಾಂಜನ ಹಚ್ಚಿ ಕಳಿಸು. ಹೋಗಿರಿ, ಹೂ ! ಇನ್ನು ಮಾತಿಲ್ಲ. ಹೋಗಿಯೇ ಬಿಡಿರಿ !

**ಶರಣೇಂದ್ರ :—** ನನ್ನ ಅವಸ್ಥೆಯೇನು, ಡಾಕ್ಟರೇ ! ಕಿಶೋರಕವಿಗಳಿಗೆ ಕಾವ್ಯಸಮಾಧಿ ಬರುವಷ್ಟರಲ್ಲಿ ಅವರ ಜೊತೆಗೆ ನಾನು ಇರಬೇಕಲ್ಲ !

**ಡಾಕ್ಟರು :—** ನೀವೂ ಹೋಗಿರಿ, ಆದರೆ ಒಂದು ನಿಮಿಷ ಮಾತ್ರ. ಈ ಮೈಕ್ರೋಸ್ಕೋಪಿನೊಳಗಿಂದ ನೋಡಿರಿ. ಏನು ಕಾಣುತ್ತದೆ?

**ಶರಣೇಂದ್ರ :—** ( ನೋಡುತ್ತ ) ಏನೋ ಕೆಂಪು ಕೆಂಪು ಹಳದಿ ಹಳದಿ, ಗುಲಾಬಿ ಗುಲಾಬಿಯಾಗಿ ಕಾಣುತ್ತದೆ, ಡಾಕ್ಟರೇ ! ಇದೇನೋ ಕಣ್ಣುಕಟ್ಟು.

**ಡಾಕ್ಟರು :—** ಕಣ್ಣುಕಟ್ಟಲ್ಲ ಶರಣರೇ, ಇದು ನೋಡಿರಿ. ಆಲದೆಲೆಯ ಮೇಲಿರುವ ಒಂದು ಗೆರೆಯಿದು. ಇದರಲ್ಲಿ ಸುಪ್ತವಾಗಿರುವ ಬಣ್ಣಗಳೆಲ್ಲ ನಿಮಗೆ ಕಾಣುತ್ತವೆ. ಆದರೆ ಗೆರೆಯೇ ಕಾಣುವದಿಲ್ಲ. ಗರುಡನನ್ನು ನೀವು ನೋಡಿದ್ದೀರಿ. ಆದರೆ ಗರುಡನ ಗರಿ ನೋಡಬೇಕು. ಮುದ್ದಿಸುವ ತುಟಿಗಳು ಅನೇಕವಾದರೂ ಮುದ್ದಿನ ಸವಿ ಒಂದೇ ಅಲ್ಲವೇ, ಕವಿಗಳೆ ! ಸಮಾಜವೇ ಬ್ರಹ್ಮನೆಂದು ಹೇಳುವ ನೀವು ಬ್ರಹ್ಮನೇ ವಿನೋದಾರ್ಥವಾಗಿ ಸಕಲ ಸಮಾಜವಾದುದನ್ನು ಮರೆತುಬಿಟ್ಟಿರಾ ! ಕಾಮನಬಿಲ್ಲಿಗೆ ಏಳು ಬಣ್ಣಗಳಿರುವದು ನಿಜ. ಆದರೆ ಈ ಬಣ್ಣಗಳ ಮೂಲ ವಾವುದು ? ಸೂರ್ಯಕಿರಣವೊಂದು. ಲೋಕಚಾಲಕನಿಂದ ಲೋಕಲೋಲಕದ ಕಡೆಗೆ ಕಿಶೋರಕವಿಗಳು ಬರಬೇಕಾಗಿದೆ. ಲೋಲಕದಿಂದ ಚಾಲಕನ ಕಡೆಗೆ ನಿಮ್ಮ ಪ್ರಗತಿಯಾಗಬೇಕು. ಭೀಮೂ.

**ಭೀಮು :—** ಬಂದೆ ಮಾಲಕ್,

**ಡಾಕ್ಟರು :—** ಈ ಶರಣೇಂದ್ರ ಕವಿಗಳಿಗೆ ದೂರದರ್ಶಿ ಕನ್ನಡಕಗಳನ್ನು ಹಾಕಿ ಕಳಿಸು. ಹೂಂ ! ಕಳಿಸಿಯೇ ಬಿಡು. ಬೇರೆ ಜಗತ್ತಿನ ಗುಂಗು ಸ್ವಲ್ಪ ಹಿಡಿಯಲಿ ಅವರಿಗೆ. ಒಂದು ಓಪಿಯಮ್ ಡೋಜಾದರೂ ಕೊಟ್ಟುಬಿಡು !

( ಭೀಮು ಶರಣೇಂದ್ರರನ್ನು ಕಳಿಸಿ ಬರುತ್ತಾನೆ. ಡಾಕ್ಟರರು ಗಡಿಯಾಳದ ಕಡೆಗೆ ನೋಡಿ )

ಓಹೋ ! ಮೂರು ಗಂಟೆಯಾಗಿ ಹೋಯ್ತು ! ಭೀಮೂ ! ಚಹಕ್ಕಿಡು ನಡೆ ! ಹೀಗೇಕೆ ಮೋರೆ ಮಾಡುತ್ತೀ ! ನೀನು ಬರಿ ಕಂಪೌಂಡರ ಅಲ್ಲ ! ನನ್ನ ಅಡಿಗೆಯವನೂ ಹೌದು.

**ಭೀಮು :—** ಅಡಿಗೆಯುವನಾಗಲು ನನ್ನದೇನೂ ಅಡ್ಡಿ ಇಲ್ಲ, ದಿನಕರ! ಆದರೆ ಇಲ್ಲಿ ಸ್ಟೌೕ ಇಲ್ಲ; ಸ್ಪಿರಿಟ್ ಇಲ್ಲ; ಪುಡಿ ಇಲ್ಲ,—

**ಡಾಕ್ಟರು :—** ಓಹೋ! ತಿಳಿಯಿತು ಬಿಡು. ಇದೇ ಮದುವೆಯಾದವರ ಸಂಸಾರ ನಮ್ಮದು. ಆ ಚಹದಂಗಡಿ ವಾಮನನಿಗೆ ಚಹ ತಂದಿಟ್ಟು ಹೋಗನ್ನು. ಹಾಗೇ ಬ್ರೆಡ್ಡಿನ ಉಸಳಿಯೊಂದಿಷ್ಟು ತರಲು ಹೇಳು. "ಉಪಮಾ ಕಾಲಿದಾಸಸ್ಯ" ಎಂದು ಹೇಳಿದರೆ— "ಬ್ರೆಡ್ಡಿನ ಉಸಳಿ ವಾಮನಸ್ಯ" ಎಂದು ಹೇಳುವಂತೆ ಮಾಡುತ್ತಾನೆ ಅವನು.

**ಭೀಮು :—** ಹೇಳುತ್ತೇನೆ. ಒಂಟಕಾಲ ಮೇಲೆ ಹೊರಟೆ. ಈ ಕವಿಗಳ ಗೊಂದಲದಲ್ಲಿ ನೀನು ಹೊಟ್ಟೆಯನ್ನೇ ಮರೆತೆಯೆಂದು ನನಗೆ ಹೆದರಿಕೆಯಾಗಿತ್ತು.

(ಹೋಗುತ್ತಾನೆ).

**ಡಾಕ್ಟರು :—** ಇದೊಂದು ಹುಚ್ಚು! ಹೊಟ್ಟೆ, ಹೊಟ್ಟೆ ಎಂದು ಬಕಬಕ ಬಡಿದುಕೊಳ್ಳುತ್ತದೆ. ಹಿಂದಿನ ಜನ್ಮದಲ್ಲಿ ಈ ಭೀಮಸೇನ ಬಕಾಸುರನಾಗಿದ್ದಿರಬೇಕು! ಅದಿರಲಿ; ಮೂರು ಹೊಡೆದಿದೆ. ಇನ್ನು ರೇಡಿಯೋದಲ್ಲಿ—ಅಲ್ಲಲ್ಲ! ಬಾನುಲಿಯಲ್ಲಿ—ಅಲ್ಲೇ ಅಲ್ಲ! ಅಲೆಯಂಚೆಯಲ್ಲಿ ಕನ್ನಡ ಸುರುವಾಗುವ ಹೊತ್ತಾಯ್ತಲ್ಲ! ಮಟಮಟ ಮಧ್ಯಾಹ್ನದಲ್ಲಿ,—ಊರ್ವಶಿ ರಂಭೆಯರು ಬಂದು ನರ್ತನಕ್ಕೆ ಕರೆದರೂ ನಿದ್ರಾಂಗನೆಯನ್ನೇ ಜನರು ಮನ್ನಿಸುವ ಸಮಯದಲ್ಲಿ—ರೇಡಿಯೋದವರು ಕನ್ನಡ ಪ್ರೊಗ್ರ್ಯಾಮ್ ಇಟ್ಟರೆ ಇದಕೇನು ನಗಬೇಕೋ ಅಳಬೇಕೋ ತಿಳಿಯದಾಗಿದೆ. ಕನ್ನಡವೆಂದರೇ ಹೀಗೆ! ಮಲ-ಮಲವೆನ್ನುವ ಮಲಮಗಳು ಸರಕಾರಕ್ಕೆ! (ಬಂದ ಭೀಮೂನಿಗೆ) ಏ! ಭೀಮೂ! ಇವತ್ತು ಕನ್ನಡದಲ್ಲಿ ಯಾರ ಭಾಷಣ?

**ಭೀಮು :—** (ಅವಸರದಿಂದ) ಅಯ್ಯೋ, ಘಾತವಾಯಿತು! ಎರಡು ಗಂಟೆಯಿಂದ ಮೂರುಕಾಲು ಗಂಟೆಯವರೆಗೆ ಭಟ್ಟಾರಕರ ನಾಟಕ ವಾಚನವಿತ್ತು.

**ಡಾಕ್ಟರು :—** ಭಟ್ಟಾರಕರೆಂದರೆ ಯಾರೋ?

**ಭೀಮು :—** (ರೆಡಿಯೋ ಸರಿಪಡಿಸುತ್ತ) ಕನ್ನಡನಾಟ್ಯ ಸೃಷ್ಟಿಯ ನೂತನಪುತ್ರರು, ದಿನಕರ. ಅವರು ರತ್ನದಂತಿದ್ದ ತಮ್ಮ 'ಹಳದಿ ನೃಪವಿಜಯ'ವನ್ನು ಓದುವವರಿದ್ದರು. ಇದೊ! ಇನ್ನೂ ಓದುತ್ತಿರುವರು ಕೇಳು!

(ಇಬ್ಬರೂ ಕುಳಿತು ಕೇಳುತ್ತಾರೆ).

**ರೇಡಿಯೊ :—** ಹಳದಿ! ಜಗತ್ತಿನಲ್ಲಿ ಏನೇನು ಹಳದಿ! ಮುಳ್ಳು-ಮುಳ್ಳಾಗಿ ಮನ್ಮಥನ ಕೊರಲಿಗಿನಂತಿದ್ದ ಆ ಕೇದಗೆಯ ಬಣ್ಣ **ಹಳದಿ**! ಹಳದಿ ಗೊರಟಿಗೆ, ಹಳದಿ ಸಂಪಿಗೆ, ಹಳದಿ ಅರಿಶಿನ! ಊಟಕ್ಕೆ ಮೊದಲು ಉಪ್ಪಿನಕಾಯಿ ಎಂದಿದ್ದು ಉಪ್ಪಿನಕಾಯಿಗಳಲ್ಲಿ ಉತ್ತಮವಾದುದನ್ನು ಕೊಡುವ ಆ ತುಂಬಿದ ನಿಂಬೆಯ ಹಣ್ಣಿನ ಬಣ್ಣವಾವುದು? **ಹಳದಿ!** ಮದುವೆಗೆ ಮೊದಲು ಕೊಡಗೂಸಾಗಿ ಬಂಗಾರವನ್ನು ಮೈಮೇಲಿಟ್ಟು ವರನನ್ನು ವರಿಸಲು ಒನಪು ಒಯ್ಯಾರದಿಂದ ಸಾಗಿ ಬರುವ ಕೊಡಗೂಸುಟ್ಟ ಸೀರೆಯ ಬಣ್ಣವಾವುದು? **ಹಳದಿ! ಮಿದು ಹಳದಿ!** ಮನೆಮನೆಯಲ್ಲಿ ಆಚಾರ್ಯರು ಪೂಜೆಮಾಡಿ ಮೈತುಂಬ ಬಡೆದುಕೊಂಡ ನಾಮಗಳ ಗಂಧದ ಬಣ್ಣವಾವುದು? **ಹಳದಿ!** ಜಗತ್ತನ್ನೇ ನಡುಗಿಸಿ ಯುದ್ಧಕಾಂಡವನ್ನು ಹೂಡಿ ಬಂದೂಕು ಪುಡಿಯ ಹುಡಿಯನ್ನೆಲ್ಲ ಜಗತ್ತಿನಲ್ಲೆಲ್ಲ ಹಬ್ಬಿಸಿದ ಗಂಧಕದ ಬಣ್ಣವಾವುದು? **ಹಳದಿ!** ಚೀನದೇಶದ ಸಮ್ರಾಟರೂ ಲಕ್ಷ್ಮೀಪುತ್ರರೂ ಆತುರದಿಂದ ಧರಿಸಿ ಮೆರೆವ ಜಾಕೀಟಿನ ಬಣ್ಣ **ಹಳದಿ**! ಉಳಿದ ದೇಶಗಳನ್ನು ಬೀಳುಗಳೆದು ತಮ್ಮ ದೇಶವನ್ನು ಹೊಗಳಿ ಹೊಗಳಿ ಮುಗಿಲಿಗೇರಿಸುವ ವರ್ತಮಾನಪತ್ರಗಳ ಬಣ್ಣ, **ಹಳದಿ!** ಕೋರಿಯವರನ್ನು ನುಂಗಿ, ಮಂಚುಕದವರನ್ನು ಮೂಲೆಗೊತ್ತಿ, ರಶಿಯದವರನ್ನು ಸೋಲಿಸಿ ಜಗತ್ತಿನಲ್ಲೆಲ್ಲ ಹಳದಿ ಗಂಡಾಂತರವೆಂದು ಹೆಸರಾಗಿ ನಿಂತ ಜಪಾನೀಯರ ಬಣ್ಣವಾವುದು? **ಹ-ಳ-ದಿ!** ದೇವದೇವನ ತಲೆಗೆ ಪಿತ್ತವೇರಿ ಕಣ್ಣುಕಾಣಿಸದೆ ಅವನು ಕೋಪಾವಿಷ್ಟನಾಗಿ ನಿಂತಾಗ ಅವನ ಕಣ್ಣೆದುರಿಗೆ ಹೊಳೆಯುವ ಬಣ್ಣವಾವುದು? **ಹಳದಿ!** ಜಗತ್ತಿನಲ್ಲಿ **ಹಳದಿಯೇ** ಶ್ರೇಷ್ಠ. **ಬೋಲೋ** ಹಳದೀ ನೃಪಾಲಕೀ ಜೈ! (ಇದು ಮುಗಿದಾಗ ರೇಡಿಯೋದಲ್ಲಿ ಆಳ್ಳು ಹುರಿದಂತೆ ಶಬ್ದವಾಗುವದು).

**ಭೀಮು :—** ಹಾ! ಮುಗಿಯಿತು. ಕೇಳಿದೆಯಾ, ದಿನಕರ! ಎಂತಹ ಆವೇಶ ನಾಟಕಕಾರರದು!

**ಡಾಕ್ಟರು :—** ಹಳದಿ, ಹಳದಿ, ಹಳದಿ. ಈ ಹಳದಿ ಬಣ್ಣದ ಮಹಿಮೆಯನ್ನು ಕೇಳಿ ಕೇಳಿ ನನ್ನ ಕಣ್ಣು ಬೆಳ್ಳಗಾಗುತ್ತ ಬಂದವು! 'ಕವಿತಾ ಕಾಮಿನಿ' ಅನ್ನುತ್ತಾರಲ್ಲ, ಆ ಕವಿತಾಕಾಮಿನಿಯೆಲ್ಲ ಹಳದಿ ಜ್ವರ ಬಂದು ಭ್ರಮಿಸಿ ಕವಿತಾಕಾಮಿಣಿಯಾಗಿದೆ ಈ ನಾಟಕಕಾರರಿಗೆ!

(ವಾಮನನು ಟ್ರೇದಲ್ಲಿ ಎರಡು ಕಪ್ಪು ಚಹ ಹಾಗು ಎರಡು ಪ್ಲೇಟು ಬ್ರೆಡ್ಡಿನ ಉಸಳಿಯನ್ನು ತೆಗೆದುಕೊಂಡು ಬರುತ್ತಾನೆ.)

**ಡಾಕ್ಟರು:—** (ದಿಟ್ಟಿಸಿ ನೋಡುತ್ತ) ಏ! ಮಾಣಿ! ನೀನೇ ಏನು ಆ ಆರೋಗ್ಯಭವನವನ್ನು ನಡಿಸುವ ಶಿಖಾ ಮಣಿ! ನಿನ್ನ ಮೋರೆಯ ಮೇಲೆ ಕಳೆಯೇ ಇಲ್ಲ. ಬಾಣಂತಿಹಳದಿಯ ಹಾಗೆ ಹಾಳುಸುರಿಯುತ್ತಿದೆಯಲ್ಲ ನಿನ್ನ ಮುಖ? ಇದೆಂತಹ ಚಹವನ್ನು ತಂದಿ? ಹಳದಿ ಕಪ್ಪಿನಲ್ಲಿ ಹಳದಿ ಚಹವನ್ನು ತರಲಿಕ್ಕೆ ಹೇಳಿತ್ತೇ ನಿನಗೆ? ಬ್ರೆಡ್ಡಿನ ಉಸಳಿಯ ಸಂಗಡ ಇದೇನು ತಂದಿ? ಬಟಾಟೆ ಪಲ್ಲೆ! ಅದರ ಬಣ್ಣವೂ ಹೊಲೆಹಳದಿ! ಎಲ, ಇದೇನು? ಈ ನಾಟಕವನ್ನು ಕೇಳಿ ನನಗೂ ಕಾಮಣಿಯಾಗಿ ಬಿಟ್ಟಿತೆ? ಭೀಮು, ಆ ರೇಡಿಯೋ ಒಂದುಮಾಟಬಿಡು! ಇನ್ನೊಮ್ಮೆ—

**ಮಾಣಿ:—** ರಾಯರೇ! ಈ ಹಳದಿ ಬೇಡಾಗಿದ್ದರೆ ಬಿಟ್ಟುಬಿಡಿರಿ. ಉತ್ತಮ ಶ್ರೀಖಂಡ—

**ಭೀಮು:—** ಏ, ಹುಚ್ಚ! ನೀನು ಚಹ ಇಟ್ಟು ಮುಂದೆ ಹೋಗು. ರಾಯರು ಮೋಜಿಗೆಂದು ಏನಾದರೂ ಹೇಳಿದರೆ ಅದನ್ನೇ ನಿಜವೆಂದು ನಂಬುತ್ತೀಯಾ! ದಿನಕರ, ಇಲ್ಲಿ ಕೂಡು. ಈ ಉಸಳಿ ತಿಂದು ಚಹ ಕುಡಿ. ಈಗ ಮೂರುವರೆ ಗಂಟೆಗೆ ಸರಿಯಾಗಿ ಊಹಾಪೋಹರಾಯ ರೆಂಬ ವ್ಯುತ್ಪತ್ತಿಶಾಸ್ತ್ರಜ್ಞರು 'ಕನ್ನಡದ ಪ್ರಾಚೀನತೆ' ಎಂಬ ವಿಷಯದ ಮೇಲೆ ಅಮೋಘವಾದ ಭಾಷಣ ಮಾಡಲಿರುವರು. ಅದನ್ನಿಷ್ಟು ಕೇಳು. ಇಕಾ! ಸುರುವೇ ಆಯಿತು ಭಾಷಣ.

(ಇಬ್ಬರೂ ಚಹ ಕುಡಿಯುತ್ತ ಕೇಳುತ್ತಾರೆ.)

**ರೇಡಿಯೊ:—** ಕರ್ ಮತ್ತು ನಾಡು, ಕರ್ನಾಡು: ಕರು ಮತ್ತು ನಾಡು, ಕರ್ನಾಡು: ಕರಕರಮುಂಡೇರ ನಾಡು, ಕರ್ನಾಡು.

**ಡಾಕ್ಟರು:—**(ಗಾಬರಿಯಾಗಿ) ಇದೇನೋ, ಭೀಮು? ರೇಡಿಯೊ ಬಹಳವಾಗಿ ಕರ್ ಕರ್ ಮಾಡುತ್ತಿದೆಯಲ್ಲ!

**ಭೀಮು:—** ಅದು ರೇಡಿಯೊ ಅಲ್ಲ, ದಿನಕರ. ಅದು ಪಂಡಿತರ ಭಾಷಣ, ಲಕ್ಷ್ಯಗೊಟ್ಟು ಕೇಳು.

**ರೇಡಿಯೋ:—**ಇಂಗ್ಲೀಷಿಗೂ ಕನ್ನಡಕ್ಕೂ ಬಹಳ ಸಂಬಂಧವಿದೆ. ಉದಾಹರಣಾರ್ಥವಾಗಿ, Mud, ಮಡ್ ಎಂದರೆ ಇಂಗ್ಲಿಷಿನಲ್ಲಿ 'ಕೆಸರು' ಎಂದರ್ಥ. ಕೆಸರು ತಲೆಯಲ್ಲಿ ತುಂಬಿಕೊಂಡವನೆ ಕನ್ನಡದಲ್ಲಿ ಮಡ್ಡ, ಮಡ್ಡ ಹೆಡ್ಡ. ಗೊಂಚಲಕ್ಕೆ ಹಳಗನ್ನಡದಲ್ಲಿ ನಾವು 'ತೊಂಗಲ' ಎಂದು ಹೇಳುತ್ತೇವೆ. ಎಂಗ್ಲೊ ಸ್ಯಾಕ್ಸನ್ ಎಂಬ ಆಂಗ್ಲರ ಮೂಲಭಾಷೆಯಲ್ಲಿ ಅದಕ್ಕೇ 'ಟಂಗ್ಲಾ' ಎಂದು ಹೇಳುತ್ತಾರೆ. 'Vulgar' ಎಂಬ ಇಂಗ್ಲಿಷ ಶಬ್ದವಿದೆಯಲ್ಲ? ಇದರಿಂದ-ಧನಗರ್‌ದಂತೆ ವ್ಹಲಗರ್ ಎಂಬ ಜಾತಿಯೂ ಪೂರ್ವದಲ್ಲಿ ಇದ್ದಿತೆಂದು ಊಹಿಸಬೇಕಾಗುತ್ತದೆ. ಈ Vulgar ಎಂಬ ಶಬ್ದವೇ ಇಂದಿನ ಕನ್ನಡದಲ್ಲಿ ಹೊಲಗೇರಿ ಯಾಗಿ ಉಳಿದಿದೆ. ಅಂತೂ, ಇಂಗ್ಲಂಡಿನಲ್ಲಿ ಪೂರ್ವಕಾಲಕ್ಕೆ ಕನ್ನಡಿಗರು ವಸಾಹತು ಮಾಡಿಕೊಂಡಿದ್ದರೆಂಬ ಮಾತು ನಿರ್ವಿವಾದವಾಗಿದೆ. ನಾಯಿಯನ್ನು ಹೊಡೆಯಲಿಕ್ಕೆ ಬಣ್ಣದ ಕೋಲೇಕೆ? ಆಂಗ್ಲರು ಪ್ಯಾಸಿಫಿಕ ಸಮುದ್ರಕ್ಕೆ ಹೋಗಿ ಹೊಸ ವಸಾಹತನ್ನು ಸ್ಥಾಪಿಸಿದಾಗ ಅದಕ್ಕೆ ಅವರು ಹೆಸರೇನಿಟ್ಟರು? ಎಂಗ್ಲಿಯಾ ಅಲ್ಲ! ಬ್ರಿಟ್ಯಾನಿಯಾ ಅಲ್ಲ! ವಿಕ್ಟೋರಿಯಾ ಅಲ್ಲ! 'ಕ್ಯಾನಡಾ' ಎಂದು ಮುಂದ್ದಾದ ಕನ್ನಡ ಹೆಸರನ್ನು ಅವರಿಟ್ಟುಬಿಟ್ಟರು.

**ಭೀಮು:—** (ಹುಚ್ಚನಂತೆ ಎದ್ದು) ಅಹಾ! ನಮ್ಮ ಕರ್ನಾಟಕ! ಸಿರಿಗನ್ನಡಂ ಗಲ್ಗೆ! ಕನ್ನಡ ತಾಯ್ ಬಾಳ್ಗೆ! ಬೋಲೋ—ಕರ್ನಾಟಕ ಮಾತಾಕೀ ಜೈ!

**ಡಾಕ್ಟರು:—** (ಭೀಮೂನ ಅಂಗಿ ಹಿಡಿದು ಜಗ್ಗಿ ಕೂಡಿಸಿ) ಏ, ಹುಚ್ಚಾ! ಇಲ್ಲಿ ಕೂಡು. ಇದೇನು ವ್ಯುತ್ಪತ್ತಿ ಶಾಸ್ತ್ರವೋ? ಉತ್ಪತ್ತಿಶಾಸ್ತ್ರವೊ? ಏನೆಂದು ತಿಳಿದು ಹೀಗೆ ಕಿರಚುತ್ತೀ?

**ಭೀಮು:—**(ಸುಮ್ಮನಿರೆಂದು ಸನ್ನೆ ಮಾಡುತ್ತಾನೆ.)

**ರೇಡಿಯೋ:—**ವಿಚಾರ ಮಾಡಿ ನೋಡಿರಿ! ಕೋಲಂಬಸನೆಂದರೆ ಯಾರು? ಕೋಲ್ ಮತ್ತು ಅಂಬಸನು; ಅಂದರೆ ನೀರಿನಲ್ಲಿ ಕೋಲು ಹಾಕಿದವನು ಅಂದರೆ ಅಂಬಿಗನು ಎಂದರ್ಥ. ಅವನು ತಾನು ಕಂಡುಹಿಡಿದ ದೇಶಕ್ಕೆ ಏನೆಂದು ಹೆಸರಿಟ್ಟ? 'ಅಮೇರಿಕೆ'ಯೆಂದಲ್ಲ! ಕನ್ನಡದ ಪ್ರಾಚೀನತೆಗೆ ದ್ರೋಹಬಗೆಯುವವರು ಹೇಳುವ ರೀತಿ ಅದು! 'ಅಮಾರಿಕಾ' ಎಂದು ಅವನು ಹೆಸರಿಟ್ಟ. ಅ—ಮಾರಿಕಾ, ಅಂದರೆ ಯಾವ ದೇಶದಲ್ಲಿ ಮಾರಿಕಾ ಬೇನೆ ಇಲ್ಲವೋ, ಆ ದೇಶ ಎಂದರ್ಥ!

**ಭೀಮು:—** (ಆವೇಶದಿಂದ) ಬೋಲೋ—

**ಡಾಕ್ಟರು:—** (ಅವನ ಬಾಯಿ ಮುಚ್ಚಿ) ಇನ್ನೊಮ್ಮೆ ಒದರಿದರೆ ಕ್ಲೋರೋಫಾರ್ಮಿನ ಗೋರಿಯಲ್ಲೇ ನಿನ್ನ ಹುಗಿದೇನು, ಎಚ್ಚರಿಕೆ!

**ರೇಡಿಯೊ:—** ಕನ್ನಡಿಗರ ಪ್ರಾಚೀನತೆಯು ಶಿಲಾ ಯುಗಕ್ಕಿಂತ ಹಿಂದೆ ಹೋಗುತ್ತದೆ. ಕಲ್ಲೇಶ್ವರನ ಗುಡಿ

ಗಳು ಕರ್ನಾಟಕದಲ್ಲಿ ಎಷ್ಟೋ ಇಂದಿಲ್ಲ? ಕಳ್ಳರೇ ಕನ್ನಡದ ಮೂಲಜನಾಂಗ. ಇವರ ದೇವರೇ ಕಲ್ಲೇಶ್ವರ, ರುದ್ರ— ruddy-freddy— ಅಂದರೆ ರುದ್ರ-ಭದ್ರ, 'ಸ್ತೇನಾನಾಂ ಪತಿಃ' ಎಂದು ವೇದದಲ್ಲಿ ಉಲ್ಲೇಖವಿದೆ. ಇನ್ನು ಚಂದ್ರ ಲೋಕ ಮಂಗಳಲೋಕದಲ್ಲಿ ಮಾನವರಿರುವದನ್ನು ಕಂಡು ಹಿಡಿದು ಆ ಲೋಕಗಳಿಗೆ ಹೋಗಲು ಇಂದಿನ ವಿಜ್ಞಾನಿಗಳು ಸಾಹಸಪಡುತ್ತಿರುವರಲ್ಲ? ನಮ್ಮ ಕನ್ನಡಿಗರು ಸಾವಿರಾರು ವರ್ಷಗಳ ಹಿಂದೆಯೇ ಹೋಗಿ ಅಲ್ಲಿ ವಾಸ ಮಾಡಿದ್ದಾರೆ. ತಿನ್ ಮತ್ತು ಕಳ್, ಅಂದರೆ ಕೂಳಬಕ್ಕರಾದ ಕಳ್ಳರು ಸಮೀಪದಲ್ಲಿಯೇ ಇದ್ದ ತಿಂಗಳ ಲೋಕವನ್ನು ಸೇರಿ ಅಲ್ಲಿಯ ಶಾಕಾಹಾರವನ್ನೆಲ್ಲ ತಿಂದು ಮುಗಿಸಿದ್ದಾರೆ. ಇದು ನಮ್ಮ ಸಂಸ್ಕೃತಿಗೆ ಭೂಷಣವೇ ಇದೆ. ಮನ್ ಮತ್ತು ಕಳ್ ಅಂದರೆ ಜ್ಞಾನವಂತರಾದ ಕಳ್ಳರು ಮಂಗಳಲೋಕಕ್ಕೆ ಹೋಗಿ ಅಲ್ಲಿ ತಮ್ಮ ಸಾಮ್ರಾಜ್ಯವನ್ನು ಬೆಳೆಸಿದ್ದಾರೆ. ಹೀಗೆ ಹತ್ತಿಪ್ಪತ್ತು ಸಾವಿರ ವರ್ಷಗಳ ಹಿಂದೇ ಹದಿನಾಲ್ಕು ಲೋಕಗಳೆಲ್ಲ ಕನ್ನಡಿಗರ ಕೈವಶವಾಗಿವೆ. ಇಂದ್ರನೆಂದರೆ ಯಾರು? ಮೈಗಣ್ಣ —ಅಂದರೆ ಮೈಗಳ್ಳ, ಅಂದರೆ ಮೈ ಇರದ ಕಳ್ಳ ಇಲ್ಲವೆ ದೇವನಾದ ಕನ್ನಡಿಗ ಎಂದರ್ಥ. ಹೀಗಾಗಿ ಸ್ವರ್ಲೋಕದಲ್ಲಿ ಸಹ ಕನ್ನಡಿಗರು ತಮ್ಮ ಬಾವುಟವನ್ನು ಸಿಲ್ಲಿಸಿದ್ದಾರೆ. ಈ ಪ್ರಕಾರ—

**ಡಾಕ್ಟರು**: — (ಒದರಲಿರುವ ಭೀಮೂನ ಬಾಯಿಯನ್ನು ಗಟ್ಟಿಯಾಗಿ ಹಿಡಿದು ಅವನು ದೀರ್ಘವಾಗಿ ಉಸಿರಾಡುವಂತೆ ಮಾಡಿ, ರೇಡಿಯೊವನ್ನು ಬಂದು ಮಾಡಿಟ್ಟು) ಈ ಪ್ರಕಾರ ವ್ಯುತ್ಪತ್ತಿಯೆಂಬ ಬಿಸಿಲುಗುದುರೆಯ ಬೆನ್ನು ಹತ್ತಿ ಕನ್ನಡಿಗರನ್ನು ಮಂಗಳಲೋಕಕ್ಕೆ ಕಳಿಸಿ ಮಂಗಳೀಕರನ್ನಾಗಿ ಮಾಡಿದರೆ ನಾವೆಲ್ಲ ಸಿಂಗಳೀಕರಾಗಿ ಬಾಳಬೇಕಾದೀತು! ಇಡಿ ಜನಾಂಗಕ್ಕೇ ಮೆಚ್ಚುಮದ್ದನ್ನು ಕೊಡುವ ಇಂಥ ವೈದ್ಯಕಿಯಿಂದ ನಮ್ಮ ಜನರೆಲ್ಲ ಹುಚ್ಚರಾಗಿ ಹೋದಾರು? ಇಕಾ! ಭೀಮೂ, ನಿನಗೆ ಈಗಾಗಲೆ ಹುಚ್ಚು ಹಿಡಿದಿದೆ. ಇನ್ನೊಮ್ಮೆ ನೀನು ಹುಚ್ಚೆದ್ದು ಬೋಲೋ— ಎಂದು ಸುರುವು ಮಾಡಿದರೆ—

**ಭೀಮು**:— ಇಲ್ಲ, ಮಹಾರಾಯ! ಬೋಲೋ ಇಲ್ಲ' ಗೀಲೋ ಇಲ್ಲ! ಹೊಟ್ಟೆಯೊಂದಿದೆಯಲ್ಲ. ಇಲ್ಲಿ ಈ ಕವಿಗಳ ತಂಡ ಬಂದ ಕೂಡಲೇ ಪೈಶೆ ಬೋಲೋ ಎಂದು ಹೇಳುವದೇ ನನ್ನ ಕೆಲಸ.

**ಡಾಕ್ಟರು**:— ಉಶ್, ದೇವರೇ! ಇಂದು ಜಾಹೀರಾತು ಸಾಕಷ್ಟಾಗಿ ಹೋಯಿತು. ಪುಕ್ಕಟೆ ಚಿಕಿತ್ಸೆ ನಡಿಸಿ, ಹೊರಗೆ ಹೋಗುವ ದೆವ್ವಗಳನ್ನೆಲ್ಲ ಒಳಗೆ ಕರೆದಂತೆ ಈ ಕವಿಗಳ ದಂಡೆಲ್ಲ ಬುಳುಬುಳು ಒಳಗೆ ಬಂತು. ಇನ್ನು ಆ:ಫೀಸು ಬಂದುಮಾಡು. ನೆಟ್ಟಗೆ ಮನೆಗೆ ಹೋಗಿ ಇದನ್ನೆಲ್ಲ ಮರೆಯಲು ಪ್ರಯತ್ನಿಸುತ್ತೇನೆ.

(ಇಷ್ಟರಲ್ಲಿ ಕುಂಡಲಿನೀ ಕವಿಗಳು ಕೈಯಲ್ಲಿ ಹಿಡಿದ ರಣಹಲಿಗೆಯನ್ನು ಹೊಡೆಯುತ್ತ ಒಂದು ಮೊಹರಮ್ ಹುಲಿಯನ್ನು ಕರೆದುಕೊಂಡು ಬರುತ್ತಾರೆ. ಹಿಂದೆ ಅವರ ಶಿಷ್ಯನೊಬ್ಬನು ಹುಲಿಯ ಝೊಂಡಾ ಹಿಡಿದಿದ್ದು ಇನ್ನೊಬ್ಬನು ಗೆಜ್ಜ ಬಾರಿಸುತ್ತಿರುತ್ತಾನೆ. ಕುಂಡಲಿನೀ ಕವಿಗಳು ಬಕ್ಕತಲೆ ಬೋಳಿಸಿದ ತಲೆಯಿಂದಿದ್ದು ಲಂಡ ಧೋತರವನ್ನುಟ್ಟು ಮೂಲೆಕಿಸೆಯ ಖಾದಿ ಶರ್ಟಿನ ಮೇಲೆ ಕೆಂಪು ಶಾಲೊಂದನ್ನು ಹೊತ್ತಿದ್ದಾರೆ. ಅವರ ಶಿಷ್ಯರ ವೇಷ ಸಣ್ಣ ಸಾಲೆ ಹುಡುಗರದು.)

**ಕುಂಡಲಿನೀಕವಿ**:— ನಾನು ಬಂದಿದ್ದೇನೆ, ಡಾಕ್ಟರ ಸಾಹೇಬ್! ನೋಡಿರಿ ಹೇಗಿದೆ ಹುಲಿಯ ಕುಣಿತ!

ಹುಲೀ ಹುಲೀ ಮೊಹರಮ್ಮ ಹುಲಿ
ಝುಡ್ ಝುಡಿ ಪಂಪನಕಾ ಝುಡ್ ಝುಡೀ ಪಂಪನಕಾ!
ಝುಡ್ ಝುಡೀ ಪಂಪನಕಾ ಝುಡ್ ಝುಡೀ ಪಂಪನಕಾ!
ಘಿಲ್ ಘಿಲ್ ಘಿಲ್ ಘಿಲ್ ಘಿಲ್ ಘಿಲ್ ಘಿಲ್ |
ಹುಲೀ ಹುಲೀ ಮೊಹರಮ್ಮ ಹುಲಿ!
ಮಂದೆಲ್ಲಾ ಕೂಡ್ತದ ಓಣೆಲ್ಲಾ ನೋಡ್ತದ
ಕುಣಿ ಕುಣಿದಾಡ್ತದ ಹುಲೀ ಹುಲೀ!
ಹುಲೀ ಹುಲೀ ಮೊಹರಮ್ಮ ಹುಲೀ!

**ಡಾಕ್ಟರು**:— (ಗಾಬರಿಯಿಂದ) ಇದೇನು ಇದೇನು—

**ಕುಂಡಲಿನೀಕವಿ**:— ಅದೂ ಇಲ್ಲ, ಇದೂ ಇಲ್ಲ, ಡಾಕ್ಟರ್! ಕವಿತೆ ಮುಗಿದ ಮೇಲೆ ಉಳಿದ ಮಾತು. ನೋಡಿರಿ! ಹುಲಿ ಹೇಗೆ ಕುಣಿಯುತ್ತದೆ!

ಹುಡುಗರೆಲ್ಲಾ ನೆರೀತಾರ ಹುಲೀ ಕುಣತಾ ಕಲೀತಾರ
ಓದೆಲ್ಲಾ ಮರೀತಾರ ಹುಲೀ ಹುಲೀ!
ಹುಲೀ ಹುಲೀ ಮೊಹರಮ್ಮ ಹುಲಿ!
ಹುಲಿ ಹಿಂದಿರುವದು ಝೊಂಡಾ
ಹುಲಿಯ ಬಾಲ ಬ್ರಹ್ಮಾಂಡಾ
ಸರಿದು ಸಲಾಂ ಹೊಡಿ ಭಂಡಾ!
ಹಗಲೆಲ್ಲಾ ಕುಣೀತದ ರಾತ್ರೆಲ್ಲಾ ಮಣೀತದ
ಸೇಂದೀ ಹಣೀತದ ಹುಲೀ ಹುಲೀ!
ಹುಲೀ ಹುಲೀ ಮೊಹರಮ್ಮ ಹುಲೀ!

ಹಸನ್ ಹುಸೇನೀ ಹೆಸರು ಶಗೋ ನೀ
ವಸ್ತಾದ ಕುಣಿ ನೀ ಮನೀ ಮನೀ !
ಹುಲೀ ಹುಲೀ ಮೊಹರಮ್ಮ ಹುಲೀ !

ಗಂಗಾಸಾನೀ ಮನಿ ಮುಂದ್ ನಾನೀ
ಕುಣಿತದ ಹುಲಿಯಾಗಿ ಇಲೀ ಇಲೀ !
ಹುಲೀ ಹುಲೀ ಮೊಹರಮ್ಮ ಹುಲೀ !

ಹುಲಿಗೇ ಕುಣಿತ ಬಂದಲ್ಲಿ
ಸಾನಿಗೇ ದುಡ್ಡು ಬರುವದೋ !
ಹುಲಿಗೆ ಪುಂಖ ಬಂದಲ್ಲಿ
ಸಾನಿಗೆ ಶಂಖ ಬರುವದೋ !

ಹೂಂ! ಈಗ ಮಂಗಳವಾಕ್ಯವನ್ನು ಮುಗಿಸಿದೆ. ಇನ್ನು ನೀವು ಕೇಳಲಿರುವದನ್ನು ಕೇಳಿರಿ, ಡಾಕ್ಟರೆ! ( ರಣಹಲಿಗೆಯನ್ನು ಶಿಷ್ಯನ ಕೈಯಲ್ಲಿ ಕೊಡುತ್ತಾರೆ.)

**ಡಾಕ್ಟರು** :— ಹೇಳುವದೂ ಕೇಳುವದೂ ಉಳಿಯಲೇ ಇಲ್ಲ. ಮುಂಜಾನೆಯಿಂದ ನನ್ನ ತಲೆ ಕೆಡುತ್ತ ಬಂದಿತ್ತು. ನೀವದನ್ನು ಸಂಪೂರ್ಣವಾಗಿ ಕೆಡಿಸಿ ಬಿಟ್ಟಿದ್ದೀರಿ !

**ಕುಂಡಲಿನೀಕವಿ** :— ಹೀಗೋ! ಸಂತೋಷ ನನಗೆ. ಹುಚ್ಚು ಹಿಡಿಸುವಂತಹ ಕವಿತೆ ಬರೆಯಬೇಕೆಂದು ಹೇಳುತ್ತಾರಲ್ಲ—ಆ ಸಿದ್ಧಿಯನ್ನು ಇಂದು ನಾನು ಮುಟ್ಟಿದ್ದೇನೆ ಎಂದಹಾಗಾಯಿತು. ನಿಮಗೆ ಹುಚ್ಚು ಹಿಡಿದಷ್ಟು ನನಗೆ ಮೆಚ್ಚು.

**ಡಾಕ್ಟರು** :— ( ಸಿಟ್ಟಿನಿಂದ ಕುಳಿತ ಕುರ್ಚಿಯಿಂದ ಅರ್ಧ ಎದ್ದು ) ಛೀ, ಮೂರ್ಖಾ! ಏಕೆ ತಲೆ ತುಂಬ ಹರಟುತ್ತೀ?

**ಕುಂಡಲಿನೀಕವಿ**:— ಹಾಂ! ನಿದಾನವಾಗಿ. ನೀವು ಬಯ್ದರೆ ನಾನು ತಪ್ಪೆಣಿಸುವದಿಲ್ಲ. ಆದರೆ ನಿದಾನವಾಗಿ ಮಾತ್ರ ಬಯ್ಯಿರಿ. 'ಕುಣಿಯೋಣು ಬಾ' ಎಂಬ ಕವಿತೆ ಚನ್ನಾಗಿದೆಯೆಂದು ಜನ ಹೇಳಿದರು. ನಾನೂ ಈ ಹುಲೀ ಕುಣಿತದ ಕವಿತೆಯನ್ನು ಬರೆದೆ.

'ಹಕ್ಕೀ
ಹಾರುತಿದೆ ನೋಡಿದಿರಾ'

ಎಂಬುದು ಒಳ್ಳೆಯ ಕವಿತೆಯೆಂದರು.

'ಚಿಕ್ಕೀ
ತೋರುತಿದೆ ನೋಡಿದಿರಾ'

ಎಂದು ನಾನು ಬರೆದೆ. ಕವನಕ್ಕೆ ಪ್ರತಿ ಕವನ: ಕವಿಗೆ ಪ್ರತಿ ಕವಿ.

**ಡಾಕ್ಟರು** :—'ಹುಲಿ ಕುಣಿತ' ವನ್ನು ಬರೆದ ತಪ್ಪಿಗೆ ಸಂಗಡ ಈ ಮರಿಹುಲಿಯನ್ನೇಕೆ ತಂದಿದ್ದೀರಿ? ಇದೇ ಈಗ ಶಿಷ್ಯನ ಕೈಯಲ್ಲಿ ಕೊಟ್ಟಿರಲ್ಲ, ಆ ರಣಹಲಿಗೆ ನಿಮಗೇಕೆ?

**ಕುಂಡಲಿನೀಕವಿ** :—ನಿಮ್ಮ ಸಂಶಯಗಳನ್ನು ನಿವಾರಿಸಲು ನಾನು ಸದಾಸರ್ವದಾ ಸಿದ್ಧನಾಗಿದ್ದೇನೆ. ನಾನು ಬರೆಯುವ ಗೀತಗಳೆಲ್ಲ ಸಾಗ್ರಸಂಗೀತ ಸಮಗ್ರ ಚಿತ್ರಯುಕ್ತವಾಗಿವೆ. ಈ ಹುಲಿಯನ್ನು ಹೀಗೆ ತಂದು ನಿಲ್ಲಿಸಿ ಈ ಗೆಜ್ಜಿಗಳನ್ನು ಹೀಗೆ ಘಲ್ಲಿಸಿದರೆ,—ನನ್ನ ಕವಿತೆಗೆ ಯಾರು ತಲೆದೂಗಲಿಕ್ಕಿಲ್ಲ? 'ಸಾವಿರ ಮಾತಿನ ಸರದಾರಾ। ನೀ। ಘಂಟೀಜವಡೇರ ಉಡದಾರಾ!' ಎಂಬ ಕವಿತೆಯನ್ನು ಬರೆದಾಗ ಸರದ ದಾರಕ್ಕೂ ಉಡದಾರಕ್ಕೂ ಗಂಟುಹಾಕಿ ತೋರಿಸಿ ಈ ಕವಿತೆಯನ್ನು ನಾನು ಹೇಳಿದೆ.

'ಎಂಥ ಚಂದ ಇಣಚಿ
ಏರಿದೆ ಮರ ಹುಣಚೀ
ಎಂಥ ಚಂದ ಇಣಚೀ'

ಎಂಬುದನ್ನು ಹೇಳಿದಾಗ ಸಾಹಿತ್ಯಸಮ್ಮೇಲನದಲ್ಲಿ ಜನರಿಗೆ ಕಂಡಿರಬೇಕೆಂದು ಇಣಚಿಯನ್ನು ಹಿಡಿದು ತಂದು ಚಿತ್ರ ಬರೆದ ಹುಣಸಿಮರದ ಮೇಲೆ ಬಿಟ್ಟಿದ್ದೆ. ಡೈರೆಕ್ಟ ಮೆಥಡ್ ಎಂದು ಹೇಳತಾರಲ್ಲ,—ಇದು ಕಾವ್ಯದಲ್ಲಿಯ ಡೈರೆಕ್ಟ ಮೆಥಡ್ಡು, ಡಾಕ್ಟರೆ!

**ಡಾಕ್ಟರು** :— Hum yes There is a method in your madness direct or otherwise, ಕವಿಗಳೇ! ನಿಮಗೆ ಉನ್ಮಾದರೋಗವಿದೆ. ಮಂಗನ ಮಂಗತನವನ್ನು ಮನುಷ್ಯನಿಗೆ ಕೊಟ್ಟು ಅವನನ್ನು ತರುಣನನ್ನಾಗಿ ಮಾಡುವ ಯತ್ನವು ಈಗ ಫ್ರಾನ್ಸದಲ್ಲಿ ನಡೆದಿದೆ. ಆದರೆ ಮನುಷ್ಯನ ಮೆದುಳನ್ನು ತಂದು ನಿಮ್ಮ ತಲೆಯಲ್ಲಿ ಸೇರಿಸುವದು ಸಾಧ್ಯವಾಗುವ ತನಕ ನಿಮ್ಮ ಈ ಮಂಗತನವು ಬಿಟ್ಟಿದ್ದಲ್ಲ. ಈ ಕವಿಗಳ ಜಾತಿಯೇ....

**ಕುಂಡಲಿನೀಕವಿ**:— ನಾನು ಹುಚ್ಚನೆಂದರೂ ನನಗೆ ಸಂತೋಷವಿದೆ, ಡಾಕ್ಟರೇ! ಹುಚ್ಚನೂ ಕವಿಯೂ ಒಂದೇ ಮಾಲಿಕೆಯಲ್ಲಿ ನಿಂತವರು.

**ಡಾಕ್ಟರು** :— ಛೀಮೂ! ಹೀಗೆಯೇ ಬಿಟ್ಟರೆ ಈ ಕವಿಗಳು ನನ್ನ ಮೆದುಳನ್ನೇ ಹಿಚುಕಿಬಿಟ್ಟಾರು. ಮೊದಲು ಇವರನ್ನೆಲ್ಲ ಇಲ್ಲಿಂದ ಹೊರಗೆ ಹಾಕೋಣ! ಏ ಹುಲಿಯೇ! ಆ ನಿನ್ನ ಬಾಲವನ್ನು ಬಿಟ್ಟುಕೊಡು! ( ಹುಲಿಯು ಗಾಬರಿಯಾಗಿ ಅತ್ತಿತ್ತ ನೋಡುತ್ತದೆ. )

ಭೀಮೂ, ಆ ಬಾಲವನ್ನು ಕಿತ್ತು ಅದನ್ನು ಈ ಕವಿಗಳಿಗೆ—ಅಲ್ಲಲ್ಲ! ಈ ಕಪಿಗಳಿಗೆ ಹಚ್ಚು (ಭೀಮು ಅದನ್ನು **ಕಿತ್ತು ಹಚ್ಚಹೋಗುತ್ತಾನೆ**. ಹೂಂ! ಕವಿಗಳೇ ನೀವು ಹಾಗೆ ಹೀಗೆಂದು ತಲೆಹಾಕಿದರೆ ನಿಮಗೆ laughing gas ಕೊಟ್ಟು ಆಜನ್ಮಪರ್ಯಂತ ಹಲ್ಲು ಕಿರಿಯುವಂತೆ ಮಾಡೇನು! ಸುಮ್ಮನೆ ಆ ಬಾಲವನ್ನು ಹಚ್ಚಿಸಿಕೊಳ್ಳಿರಿ,—ಹೂಂ—ಹಾಗೆ! ಏ ಗೆಜ್ಜೆಯವನೇ! ನೀನು ಆ ಗೆಜ್ಜೆಯನ್ನು ನಿನ್ನ ಗುರುಗಳಿಗೆ ಕಟ್ಟಿ ಬಾರಿಸಹತ್ತು. ಹಿಂದೆಮುಂದೆ ನೋಡಿದರೆ, ನಾಲ್ಕುಮಂದಿ ಬಂದು ನಿನ್ನನ್ನು ಹೊತ್ತಾರು! ಆ ರಣಹಲಿಗೆಯನ್ನು ಹುಲಿಯ ಕೈಯಲ್ಲಿ ಕೊಡು. ಏ, ಹುಲಿ! ನೀನು ರಣಹಲಿಗೆ ಹೊಡಿ! ಕಪಿಗಳೇ! ನೀವು ಕುಣಿಯಿರಿ! ಹೂಂ! ಹೀಗೆ! ಕುಣಿದರೆ ಹೀಗೆ ಕುಣಿಯಬೇಕು! ಕುಣಿಯದಿದ್ದರೆ ನಾನೆಲ್ಲಿ ಬಿಡುತ್ತೇನೆ. ನಿಮ್ಮಪ್ಪನಿಗೂ ಬಿಟ್ಟವನಲ್ಲ! ಏ, ಭೀಮೂ ಈ ಮೊಹರಮ್ಮಿನ ಕತ್ತಲರಾತ್ರಿಯ ಮೆರವಣಿಗೆಯವರನ್ನು ಕಿವಿ ಹಿಡಿದು ಹೊರಗೆ ಬಿಟ್ಟು ಬಾ. ಮೊದಲು, ಹುಲಿ. ಆ ಮೇಲೆ ಗುರು ಶಿಷ್ಯರು,—ಕಪಿಗಳೇ! ನಮಸ್ಕಾರ! ಪ್ರಳಯಕಾಲದ ವರೆಗೆ ನಮ್ಮ ನಿಮ್ಮ ಭೆಟ್ಟಿಯಿಲ್ಲ ಇನ್ನು!

(ಭೀಮು ಒಬ್ಬೊಬ್ಬರನ್ನಾಗಿ ಹೊರಗೆ ಹಾಕಿಬರುತ್ತಾನೆ)

**ಭೀಮು**:— ಹೂಂ! ಇನ್ನಾರ ಕಿವಿ ಹಿಂಡಬೇಕು ಹೇಳಿರಿ, ಡಾಕ್ಟರಸಾಹೇಬ್?

**ಡಾಕ್ಟರು**:—(ಜೋಲು ಮೋರೆ ಹಾಕಿ) ನನ್ನೊಡನೆಯೂ ವಿನೋದವೇ, ಭೀಮೂ! ಒಂದು ದಿವಸದಲ್ಲಿಯೇ ಈ ಸಾಹಿತಿಗಳ ಸಂಗತಿ ಸಾಕುಬೇಕಾಗಿ ಹೋಯ್ತು. ನಾನು ಅವರ ಮೇಲೆ practise ಮಾಡಿ ಬದುಕುವದು ದೂರದ ಮಾತು! ಅವರೇ ನನ್ನ ಮೇಲೆ practise ಮಾಡಿ ನನ್ನ ಜೀವವನ್ನು ಹಿಂಡುವ ಹಾಗೆ ಕಾಣುತ್ತದೆ. ನನಗೆ ಹೊಳೆದ ನಾಲ್ಕು ಮಾತುಗಳನ್ನು, ಕೇಳಿದ ಎಂಟು ಮಂದಿಗೆ ಹೇಳಿ ಕಳಿಸಿದ್ದೇನೆ. ಇದಕ್ಕಾಗಿ ಅವರು ನನ್ನನ್ನೆಷ್ಟು ಶಪಿಸುವರೋ ಯಾರಿಗೆ ಗೊತ್ತು! ವಕೀಲನಾಗಿ ಸುಳ್ಳು ಹೇಳಿ ದುಡ್ಡು ಸೆಳೆಯಬಹುದು; ನಾಲಗೆಯ ಚಾಪಲ್ಯವೊಂದಿದ್ದರೆ ಸಾಕು. ಡಾಕ್ಟರನಾಗಿ—ಬೇಕಾಗಲಿ ಬಿಡಲಿ—ಎರಡು ಇಂಜೆಕ್ಶನ್ ಕೊಟ್ಟು ಹತ್ತು ದುಡ್ಡು ವಸೂಲು ಮಾಡಬಹುದು—ಕೈಚಲಾಕಿಯೊಂದಿದ್ದರೆ. ಆದರೆ ವಿಮರ್ಶಕನಿಗೆ ತಲೆ, ನಾಲಗೆ, ಮೆದುಳ, ಕೈ—ಎಲ್ಲವೂ ಸರಿಯಿರಬೇಕಾಗುತ್ತದೆ. ಇದ್ದರೂ ಸಹ ಅವನನ್ನು ಕೇಳುವವರಿಲ್ಲವಲ್ಲ! ಇನ್ನು ಈ ಸಾಹಿತ್ಯದ ಉಸಾಬರಿಯನ್ನು ಬಿಟ್ಟು ಮಾನಸಶಾಸ್ತ್ರವನ್ನು ಹಿಡಿಯುತ್ತೇನೆ. ಹೌದು; ಇದೊಂದು ದಿವ್ಯ ಕಲ್ಪನೆ! ಭೀಮೂ, ನಾಳಿಂದ ನನ್ನ ಬೋರ್ಡಿನ ಅಕ್ಷರ, ಎಲ್ಲವನ್ನೂ ಬದಲು ಮಾಡು. ನಾಳೆ ನಾನು—ವಿಮರ್ಶಕ ವೈದ್ಯನಲ್ಲ. ನಾಳಿಂದ ನಾನು Doctor of Spiritual Diagnosis ಆಗುತ್ತೇನೆ! ತಿಳಿಯಿತೇ, ನಿನಗೆ. ಡಿ. ಎಸ್. ಡಿ!

**ಭೀಮು**: —ಹಾಗಂದರೇನು, ಮಹಾರಾಯಾ! ಅದರಲ್ಲಾದರೂ ನಮ್ಮ ಹೊಟ್ಟೆ ತುಂಬೀತೇ? ಯುರೋಪೆಲ್ಲ ತಿರುಗಾಡಿರುವಿಯೆಂದು ನಾನು ಬಂದು ನಿನ್ನ ಬೆನ್ನು ಬಿದ್ದರೆ,—ನೀನು ಬೆನ್ನಿಲ್ಲದ ಅಂತರಪಿಶಾಚಿಯಾಗಿ ಕಾಣುತ್ತಿ! ಈ ಸಾಹಿತ್ಯದ ಗೊಡವೆ ಬೇಡ,—ಅದು ವ್ಯವಹಾರವಲ್ಲವೆಂದು ಹೇಳಿದರೆ,—ನಾನು ಮ್ಯಾಟ್ರಿಕ್ ನಪಾಸಾದವ—ಮಂಗಳಸೂತ್ರವಿಲ್ಲದವ,— ನನ್ನನ್ನು ಕೇಳುವವರಾರು? ಇನ್ನು ಇದಾವ ಹೊಸ ರೋಗ ಹಾಕುತ್ತೀ! ಡಿ. ಎಸ್. ಡಿ. ಎಂದು? ಅದಕ್ಕಿಂತ ಡೀ. ಡೀ. ಡಿಕ್ ಎಂದು ಹೇಳಿ ಎಲ್ಲವನ್ನೂ ಮುಗಿಸಿಬಿಡು. ಬಂದ ಹಾದಿಯಿಂದ ತಿರುಗಿ ಹೋಗುತ್ತೇನೆ.

**ಡಾಕ್ಟರು**:— ಹಾಗಲ್ಲ, ಭೀಮು! ಡಿ. ಎಸ್. ಡಿ. ಎಂದರೆ ಸತ್ವಪರೀಕ್ಷೆಯ ಡಾಕ್ಟರು! ಜಗತ್ತಿನಲ್ಲಿ ಜನರಿಗೆ ತಮ್ಮ ಸತ್ವವನ್ನು ಬೆಳಿಸಲು ಬೇಕಾಗುವ ತತ್ವಗಳನ್ನೆಲ್ಲ ನಮ್ಮ ಅಂಗಡಿಯಲ್ಲಿಡೋಣ! ಕೆಲವರಿಗೆ ಪ್ರೇಮದ ಹುಚ್ಚು ಹಿಡಿದಿರುತ್ತದೆ. ಕೆಲವರಿಗೆ ದುಡ್ಡಿನ ದೆವ್ವ ಬಡಿದುಕೊಂಡಿರುತ್ತದೆ. ಮತ್ತೆ ಹಲವರಿಗೆ ಅಸೂಯೆಯಿಂದ ಹೊಟ್ಟೆ ನೋಯುತ್ತದೆ. ಕೆಲವರಿಗೆ ಸಂಪತ್ತಿರುತ್ತದೆ; ಆರೋಗ್ಯವಿರುವದಿಲ್ಲ. ಆರೋಗ್ಯವಿರುತ್ತದೆ; ಸಂಪತ್ತಿರುವದಿಲ್ಲ. ಈ ಎಲ್ಲ ವೈಷಮ್ಯಗಳನ್ನು ಹೋಗಲಾಡಿಸಿ ಸುಖವನ್ನು ಮಾನಸೋಪಚಾರದಿಂದ ಒದಗಿಸಿ ಕೊಡುತ್ತೇನೆಂದು ಡಾಣಾಡಂಗುರವಾಗಿ ಸಾರಬೇಕು. 'ಗುಣವಾಗದಿದ್ದರೆ ಹಣ ಪರತ್' ಎಂದು ವರ್ತಮಾನಪತ್ರಗಳಲ್ಲೆಲ್ಲಾ ಜಾಹಿರಾತು ಕೊಡಬೇಕು. ಆಗ ನೋಡು—ಜನರು ಮುಕುರುತ್ತಾರೆ. ಈ ನನ್ನ ಮಾನಸೋಪಚಾರದ ಆಸ್ಪತ್ರಿಯಲ್ಲಿ ನೀನು ಉಪಗುರುವಾಗು. ಅಂಗಾರ ಕೊಟ್ಟು ತಲೆಯ ಮೇಲೆ ನವಿಲುಗರಿಯಾಡಿಸುವದು ನಿನ್ನ ಕೆಲಸ.

**ಭೀಮು**:—ನವಿಲುಗರಿಯಾಡಿಸುವದೂ ಬೇಡ, ಜನರಿಂದ ದುಡ್ಡು ಸೆಳೆಯದೆ ಅವರ ಕಣ್ಣಲ್ಲಿ ಮಣ್ಣು ತೂರು

ನನಗೂ ಬೇಡ. ನೀನು ನವಿಲುಗರಿಯಾಡಿಸುವವನಲ್ಲ, ಹಾರುವ ಹಕ್ಕಿಯ ಪುಚ್ಛವೆಣಿಸುವವ ಕಾಣುತ್ತೀ. ಆಗಲಿ. ನೀನು ಜನರ ಸತ್ವಪರೀಕ್ಷೆ ಮಾಡು. ನಾನು ಇನ್ನೊಂದು [illegible] ಹೋಗಿ ನನ್ನ ದೈವಪರೀಕ್ಷೆ ಮಾಡುತ್ತೇನೆ.

( ಹೊರಡಲುದ್ಯುಕ್ತನಾಗುತ್ತಾನೆ. )

**ಡಾಕ್ಟರು**:—ಏ, ನಿಲ್ಲು ಭೀಮು ! ಎಲ್ಲಿ ಹೋಗುತ್ತೀ! ನಾನೂ ನೀನೂ ಲಂಗೋಟಿ ಗೆಳೆಯರು. ಒಂದೇ ತಾಟಿನಲ್ಲಿ ಇಬ್ಬರೂ ಊಟಮಾಡಿದ್ದೇವೆ. ನಿಲ್ಲು ! ಮೊದಲು ನಾನು ನಿನ್ನ diagnosis ಮಾಡಿ ನಿನಗೆ ಸುಖವುಂಟಾಗುವ ಹಾಗೆ ಮಾಡುತ್ತೇನೆ. ನಿನಗೆ ಖಾತ್ರಿಯಾದ ಮೇಲೆ..

**ಭೀಮು**:— ನನಗೆ ನನ್ನ ಸುಖವೆಲ್ಲಿದೆ ಗೊತ್ತಿದೆ— ನನ್ನ ಹೊಟ್ಟೆಯಲ್ಲಿ. ಅದಕ್ಕೆ ಮಾನಸೋಪಚಾರ ಬೇಡ, ಷಡ್ರಸೋಪಚಾರ ಬೇಕು. ಈಗ ಹಸಿದಿದ್ದೇನೆ. ನನ್ನನ್ನು ತಡವಬೇಡ. ( ಹೊರಡುತ್ತಾನೆ )

**ಡಾಕ್ಟರು** :— ಹಾಗಲ್ಲ. ಸಿಟ್ಟಿನ ಕೈಯಲ್ಲಿ ಬುದ್ಧಿ ಕೊಡಬೇಡ. ನಿಲ್ಲು, ಏ ಭೀಮೂ !

**ಭೀಮು** :— ( ಮುನ್ನೋಡಿ ಹೋಗುವಾಗ ಹಿಂತಿರುಗಿ ನೋಡುತ್ತ ) ಇಕಾ ! ಇನ್ನು ಸಾಕುಮಾಡು ! ನಿನ್ನ ಬೆನ್ನುಹತ್ತಿ ಏನು ಸೌಭಾಗ್ಯವನ್ನು ಪಡೆಯಬಹುದೆಂಬುದನ್ನು ಕಂಡುಕೊಂಡಿದ್ದೇನೆ. ಇನ್ನು ಬೇಕಾದರೆ ನೀನು ನನ್ನ ಬೆನ್ನುಹತ್ತಿ ಬಾ !

( ಭೀಮು ಲಗುಬಗೆಯಿಂದ ಹೋಗುತ್ತಾನೆ. ಕೈಮಾಡಿ ಕರೆಯುತ್ತ ದಿನಕರರಾಯನು ಅವನನ್ನು ಹಿಂಬಾಲಿಸುತ್ತಾನೆ. ತೆರೆಯು ಬೀಳುತ್ತದೆ ).

—ವಿ. ಕೃ. ಗೋಕಾಕ